ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Post Office 560001,
Posting Day 12th. Reg. No. RNP/BGS/2094/20011-13 Licence to post
RNI No.: KARBILO 2004/18001

# ಸಂಯುಕ್ತ ಸಹಕಾರಿಯ ನಿರ್ದೇಶಕರ ಪರಿಚಯ





ವೃತ್ತಿಯಲ್ಲಿ ವಕೀಲರು,
ಪ್ರವೃತ್ತಿಯಲ್ಲಿ ಸಹಕಾರಿ.

## ಶ್ರೀ ಆನಂದ ಎಲ್.ಎಸ್.

ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಎಲ್. ಎಸ್.ಆನಂದ ರವರು ಹೊಸಪೇಟೆಯ ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿಯಿಂದ ಬಳ್ಳಾರಿ ಜಿಲ್ಲೆಯ ಪ್ರತಿನಿಧಿ. ಕಳೆದ ಮಾರ್ಚ್ 2011ರಲ್ಲಿ ಸಂಯುಕ್ತ ಸಹಕಾರಿಯ ಚುನಾವಣೆಯಲ್ಲಿ ಆಯ್ಕೆಯಾದವರು. ಯುವಕರು. ಉತ್ಸಾಹಶಾಲಿಗಳು. ಸಹಕಾರಿ ಕ್ಷೇತ್ರದ ಬಗ್ಗೆ ಹೆಚ್ಚಿನ ಆಸಕ್ತಿಯುಳ್ಳವರು.

ಮೂಲತಃ ಕೃಷಿಕ ಕುಟುಂಬದಿಂದ ಬಂದವರು. 15–8–1974ರಲ್ಲಿ ಹೊಸಪೇಟೆಯಲ್ಲಿ ಜನನ. ಪ್ರಾಥಮಿಕ ಹಾಗೂ ಮಾಧ್ಯಮಿಕ ಹಾಗೂ ಬಿ.ಎ. ಪದವಿ ಶಿಕ್ಷಣವನ್ನು ಹೊಸಪೇಟೆಯಲ್ಲಿ ಪೂರೈಸಿದ ಬಳಿಕ ಧಾರವಾಡದಲ್ಲಿ ಕಾನೂನು ವ್ಯಾಸಂಗದ ನಂತರ ಹೊಸಪೇಟೆಯಲ್ಲಿ ವಕೀಲಿ ವೃತ್ತಿ. ಸಹಕಾರಿ ಕ್ಷೇತ್ರದ ಬಗ್ಗೆ ತಂದೆ ಶ್ರೀ ಎಲ್.ಸಿದ್ದಪ್ಪರವರಿಂದ ಸ್ಫೂರ್ತಿ. ಅವರೆ ಮಾರ್ಗದರ್ಶಕರು ಹಾಗೂ ಗುರುಗಳು. ಅಮರಾವತಿ ಪ್ರಾಥಮಿಕ ಪತ್ತಿನ ಸಹಕಾರಿ ಸಂಘದಲ್ಲಿ ಹಲವಾರು ವರ್ಷಗಳ ಕಾಲ ಅಧ್ಯಕ್ಷರಾಗಿ, ತಾಲ್ಲೂಕು ರೈತ ಸಂಘದ ಸಹಕಾರ್ಯದರ್ಶಿಯಾಗಿ ಹಾಲಿ ನಿರ್ದೇಶಕರಾಗಿ ಸೇವೆಸಲ್ಲಿಸಿದ್ದಾರೆ. ಅಣ್ಣ ಶ್ರೀ ಬಸವರಾಜರವರೂ ಸಹ ಅಮರಾವತಿ ಪ್ರಾಥಮಿಕ ಪತ್ತಿನ ಸಹಕಾರಿ ಸಂಘದ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇಡೀ ಕುಟುಂಬವೇ ಸಹಕಾರಿ ಕ್ಷೇತ್ರದ ಬಗ್ಗೆ ಹೆಚ್ಚಿನ ವಿಶ್ವಾಸ ಹೊಂದಿದವರು. ಹೀಗಾಗಿ ಶ್ರೀಯುತ ಆನಂದರವರು ಸಹಕಾರಿ ಕ್ಷೇತ್ರದ ಮೂಲಕ ಸಮಾಜದ ಆರ್ಥಿಕ ಹಾಗೂ ಸಾಮಜಿಕ ಅಭಿವೃದ್ಧಿ ಸಾಧ್ಯ ಎಂದು ದೃಢವಾಗಿ ನಂಬಿ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಹಕಾರ ಕ್ಷೇತ್ರದ ಸಾಧನೆಗಳ ಬಗ್ಗೆ ಹೆಮ್ಮೆಯಿರುವ ಶ್ರೀಯುತರು ಈ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸುವ ಮನೋಭಾವವನ್ನು ಸಹಕಾರಿಗಳು ಬೆಳೆಸಿಕೊಳ್ಳಬೇಕೆಂದು ಅವರ ಅಭಿಪ್ರಾಯವಾಗಿದೆ.

ವಕೀಲಿ ವೃತ್ತಿಯಲ್ಲಿರುವ ಶ್ರೀಯುತರು ಹೊಸಪೇಟೆ ವಕೀಲರ ಸಂಘದ ಜಂಟಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ನಿಷ್ಕ್ರೀಯವಾಗಿರುವ ಹೊಸಪೇಟೆ ವಕೀಲರ ಸಹಕಾರ ಸಂಘವನ್ನು ಕಾರ್ಯನಿರ್ವಹಿಸುವಂತೆ ಮಾಡುವ ಹಾಗೂ ಜಿಲ್ಲೆಯಲ್ಲಿ ಹೊಸ ಹೊಸ ಕ್ಷೇತ್ರಗಳನ್ನು ಗುರುತಿಸಿ ಸೌಹಾರ್ದ ಸಹಕಾರಿ ಕ್ಷೇತ್ರದಡಿಯಲ್ಲಿ ಹೊಸ ಸೌಹಾರ್ದ ಸಹಕಾರಿಗಳನ್ನು ನೊಂದಣಿಮಾಡಿಸಿ ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಅಬಿವೃದ್ಧಿ ಪಡಿಸುವ ಉದ್ದೇಶ ಹೊಂದಿದ್ದಾರೆ. ■



## ಪತ್ರಿಕೆಯ ಬಗ್ಗೆ ಅನಿಸಿಕೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇವರಿಂದ ಪ್ರಕಟವಾಗುತ್ತಿರುವ 'ಸ್ವಾಭಿಮಾನಿ ಸಹಕಾರಿ'ಯು ಉತ್ತಮವಾದ ಮಾಹಿತಿಯನ್ನೊಳಗೊಂಡು, ಪ್ರತಿ ಸೌಹಾರ್ದ ಸಹಕಾರಿಗೆ ಮಾರ್ಗ ದರ್ಶಿಕೆಯಾಗಿ ಮೂಡಿಬರುತ್ತಿದೆ. ಪ್ರತಿ ಸಂಚಿಕೆಯೂ ವೈವಿಧ್ಯಮಯವಾದ ವಿಷಯಗಳನ್ನು ಓದುಗರಿಗೆ ತಿಳಿಸುತ್ತ ಬಂದಿದೆ. ಈ ಕ್ಷೇತ್ರದ ಪ್ರತಿಯೊಬ್ಬರ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಲೇಖನಗಳು ನಿಜಕ್ಕೂ ಯೋಗ್ಯವಾಗಿವೆ. ಈ ಸಂಚಿಕೆಯ ಬಗ್ಗೆ ಓದುಗರು ತಮ್ಮ ಅಭಿಪ್ರಾಯವನ್ನು ಕಳುಹಿಸಿದಲ್ಲಿ ಅನಿಸಿಕೆಗಳನ್ನು ಮುಂಬರುವ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.

–ಸಂ.

### ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತಿಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜೆ. ಕಾರಕೂನ | 9482734077 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ನಂ.436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1. ದೂ. 0831–2401551

ಇವರಿಂದ ಪ್ರಕಟಿತ :
**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
(ವಿವೇಕಾನಂದ ಕಾಲೇಜು ಎದುರು)
ಒಂದನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 560010.
web : www.souharda.coop, E-mail : souharada@souharada.coop
**ದೂರವಾಣಿ ಸಂಖ್ಯೆಗಳು :**
23378375/76/77/78/79/80 ಹಾಗೂ 23474408, 23573291

ಸಂಪಾದಕ, ಪ್ರಕಾಶಕ: **ಶರಣಗೌಡ ಜಿ. ಪಾಟೀಲ,**
ಸಂಚಿಕೆ ಸಿದ್ಧತೆ **ವಿ.ಜೆ.ಕಾರಕೂನ**
ಮುದ್ರಣ : ವರ್ಣ ಕಮ್ಯುನಿಕೇಷನ್ಸ್, ಬೆಂಗಳೂರು.

# ಸ್ವಾಭಿಮಾನಿ ಸಹಕಾರಿ

ದಶಮಾನೋತ್ಸವ ವರ್ಷ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸಂಪುಟ 8 * ಸಂಚಿಕೆ 9 * ಅಕ್ಟೋಬರ್ 2011 * ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ * ವಾರ್ಷಿಕ ಚಂದಾ 50/- * ಬೆಲೆ ರೂ. 5/-

ಅಕ್ಟೋಬರ್ 2
ಗಾಂಧಿ ಜಯಂತಿ



## ನಾಡಹಬ್ಬ ದಸರಾ ಹಾಗೂ ಬೆಳಕಿನ ಹಬ್ಬ ದೀಪಾವಳಿಯ ಶುಭಾಶಯಗಳು



ಶ್ರೀ ಎಸ್.ಆರ್. ಸತೀಶ್ ಚಂದ್ರ
ಅಧ್ಯಕ್ಷರು



ಶ್ರೀ ಗುರುನಾಥ ಜ್ಯಾಂತಿಕರ್
ಉಪಾಧ್ಯಕ್ಷರು

ಹಾಗೂ ಆಡಳಿತ ಮಂಡಳಿ

ಸೌಹಾರ್ದ ಸಹಕಾರಿಗಳ ಸಂಖ್ಯೆ : 1800 - 'ಇ' ಸ್ಟಾಪಿಂಗ್ ಕೇಂದ್ರಗಳ ಸಂಖ್ಯೆ - 401



# ಸಹಕಾರಿ ರಂಗದಲ್ಲಿ ಹೊಸ ಕ್ಷೇತ್ರಗಳ ಆಯ್ಕೆ

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ವಿಜಯದಶಮಿಯ ಹಾಗೂ ದೀಪಾವಳಿಯ ಶುಭಾಶಯಗಳು. ನಾಡಿನಾದ್ಯಂತ ವಿಜೃಂಭಣೆಯಿಂದಾಚರಿಸಲಾಗುವ ಎಲ್ಲ ಕಾರ್ಯಗಳಲ್ಲಿ ವಿಜಯ ಸಾಧಿಸುವ ಸಂಕೇತವಾಗಿರುವ ವಿಜಯದಶಮಿ ಆಚರಣೆಯ ನಂತರ ದೀಪಗಳ ಹಬ್ಬ ದೀಪಾವಳಿಯನ್ನು ಆಚರಿಸಿ ಹೊಸ ಉತ್ಸಾಹದೊಂದಿಗೆ ಕಾರ್ಯನಿರ್ವಹಿಸುವ ಈ ಸಂದರ್ಭದಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೂ ಅವರ ಕುಟುಂಬದವರಿಗೆ ಶುಭ ಹಾರೈಸುತ್ತೇನೆ. ಕಷ್ಟಗಳೆಲ್ಲ ದೂರವಾಗಿ ಸುಖ ಶಾಂತಿ ನೆಮ್ಮದಿಯ ಬಾಳು ನಿಮ್ಮದಾಗಲಿ.

"ಆಡು ಮುಟ್ಟದ ಸೊಪ್ಪಿಲ್ಲ ರವಿ ಕಾಣದ ಸೊಬಗಿಲ್ಲ" ವೆಂಬ ನಾಣ್ಣುಡಿಯಂತೆ ಸಹಕಾರ ಕ್ಷೇತ್ರ ಮಾನವ ಜೀವನದ ಎಲ್ಲ ಚಟುವಟಿಕೆಗಳಲ್ಲಿ ಹಾಸುಹೊಕ್ಕಾಗಿ ಕಾರ್ಯನಿರ್ವಹಿಸುತ್ತಿದೆ ಸಹಕಾರ ಕ್ಷೇತ್ರ ಈ ದೇಶದಲ್ಲಿ ಕಾರ್ಯಾಚರಣೆ ಪ್ರಾರಂಭವಾಗಿ 107 ವರ್ಷಗಳು ಕಳೆದಿವೆ. ದೇಶದ ಅರ್ಥವ್ಯವಸ್ಥೆಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ.. ಈ ದೇಶದಲ್ಲಿ "ಹಸಿರು ಕ್ರಾಂತಿ" "ಶ್ವೇತ ಕ್ರಾಂತಿ" ಗಳ ಹರಿಕಾರನಾಗಿ ಪ್ರಸ್ತುತ "ಜ್ಞಾನದ ಕ್ರಾಂತಿ"ಗೆ (Knowledge Revolution) ಸಿದ್ಧವಾಗಿದೆ. ತಾನು ಆವರಿಸಬಹುದಾದ ಹೊಸ ಹೊಸ ಕ್ಷೇತ್ರಗಳ ಹುಡುಕಾಟದಲ್ಲಿದೆ. ಖಾಸಗೀಕರಣ, ಜಾಗತೀಕರಣ ಹಾಗೂ ಉದಾರೀಕರಣಗಳ ವ್ಯವಸ್ಥೆಯ ಅರ್ಥವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರ ಸಾಂಪ್ರದಾಯಿಕ ಆರ್ಥಿಕ ಚಟುವಟಿಕೆಗಳಿಗಷ್ಟೆ ಸಿಮೀತಗೊಳ್ಳದೆ ಹೊಸ ಕ್ಷೇತ್ರಗಳ ಆಯ್ಕೆ ಅನಿವಾರ್ಯ. ಇಂದಿನ ಅವಶ್ಯಕತೆ ಹಾಗೂ ಅಪೇಕ್ಷೆಯೂ ಹೌದು.

ವ್ಯವಸಾಯ, ಹಾಲು, ಗ್ರಾಹಕ, ಮಾರಾಟ, ರೂಪಾಂತರ, ಗೃಹನಿರ್ಮಾಣ, ಕೈಗಾರಿಕೆ, ಪತ್ತಿನ ಸಹಕಾರ ಕ್ಷೇತ್ರ, ಮಹಿಳಾ ಸಹಕಾರ ಸಂಘಗಳು, ಜೇನು ಸಾಕಾಣಿಕೆ, ಪಟ್ಟಣ ಸಹಕಾರ ಬ್ಯಾಂಕುಗಳು, ಸಹಕಾರಿ ಸಕ್ಕರೆ ಕಾರ್ಖಾನೆಗಳು, ನೇಕಾರರ ಸಹಕಾರ ಸಂಘಗಳು, ಮೀನುಗಾರರ ಸಹಕಾರ ಸಂಘಗಳು, ಕಾರ್ಮಿಕರ ಸಹಕಾರ ಸಂಘಗಳು, ಗುಡ್ಡಗಾಡು ಜನರ ಸಹಕಾರ ಸಂಘಗಳು, ಅರಣ್ಯ ಕೆಲಸಗಾರರ ಸಹಕಾರ ಸಂಘಗಳು, ತೆಂಗಿನ ನಾರಿನ ಸಹಕಾರ ಸಂಘಗಳು, ಎಣ್ಣೆ ಬೀಜ ಸಹಕಾರ ಸಂಘಗಳು, ಸಾರಿಗೆ ಸಹಕಾರ ಸಂಘಗಳು, ಉಣ್ಣೆ ಸಹಕಾರ ಸಂಘಗಳು , ರೇಷ್ಮೆ ಸಹಕಾರ ಸಂಘಗಳು ವಿದ್ಯಾರ್ಥಿ ಸಹಕಾರ ಸಂಘಗಳು, ಶಿಕ್ಷಣ ಸಹಕಾರ ಸಂಘಗಳು, ಮುದ್ರಣ ಸಹಕಾರ ಸಂಘಗಳು, ಆನೆ ಸಾಕುವವರ ಸಹಕಾರಿ ಸಂಸ್ಥೆಗಳು, ಹಾವಾಡಿಗರ ಸಹಕಾರ ಸಂಘ, ಸಹಕಾರಿ ಆಸ್ಪತ್ರೆಗಳು, ಹೊಸ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದಾಗಿನಿಂದ ಸೌಹಾರ್ದ ಸಹಕಾರಿಗಳು ಹೀಗೆ ಇನ್ನೂ ಹತ್ತು ಹಲವು ವಿಧದ ಸಹಕಾರಿ ಸಂಘಗಳು ಜೀವನದ ಎಲ್ಲ ಆಯಾಮಗಳಲ್ಲೂ ಸಹಕಾರ ಕ್ಷೇತ್ರ ಆವರಿಸಿ ಸಾಕಷ್ಟು ಸಾಧನೆಗಳಿದ್ದಾಗ್ಯೂ ಸಹಕಾರ ಕ್ಷೇತ್ರ ನಿರೀಕ್ಷಿಸಿದ ಸಾಧನೆ ಮಾಡಲು ವಿಫಲವಾಗಿದೆ ದೇಶದ ಜನಸಂಖ್ಯೆಯ ಕೇವಲ 25% ಜನರಿಗೆ ಮಾತ್ರ ಸೇವೆ ಸಲ್ಲಿಸಲು ಸಾಧ್ಯವಾಗಿದೆ. ಸಾಧಿಸಬೇಕಾದುದು ಸಾಕಷ್ಟಿದೆ ಎಂಬುದು ಆರ್ಥಿಕ ತಜ್ಞರ ಅಭಿಪ್ರಾಯವಾಗಿದೆ.

ಪ್ರವಾಸೋದ್ಯಮ, ಪತ್ರಿಕೋದ್ಯಮ, ಸಮೂಹ ಮಾಧ್ಯಮ, ಆಧುನಿಕ ತಂತ್ರಜ್ಞಾನ, ಆಯಾತ–ನಿರ್ಯಾತ ಕ್ಷೇತ್ರ, ಗಣಿ ಕಾರ್ಮಿಕರು, ಅಸಂಘಟಿತ ಕಾರ್ಮಿಕರು, ಪೇಪರ್ ಕೈಗಾರಿಕೆ, ಸ್ಟೇಶನರಿ ವಸ್ತುಗಳ ತಯಾರಿಕಾ ಸರಬರಾಜು, ಗುಡಿಕೈಗಾರಿಕೆಗಳು, ಗೃಹ ಕೈಗಾರಿಕೆಗಳ ಉತ್ಪಾದನೆ ಹಾಗೂ ಮಾರಾಟ, ಸಣ್ಣ ವ್ಯಾಪಾರಿಗಳು, ಸಿದ್ಧ ಉಡುಪುಗಳ ತಯಾರಿಕಾ ಘಟಕಗಳು ಹಾಗೂ ವಿತರಣಾ ಕೇಂದ್ರಗಳು, ಹೂವಿನ ವ್ಯಾಪಾರ, ಬ್ಯೂಟಿ ಪಾರ್ಲರಗಳು, ಅಲಂಕಾರಿಕ ವಸ್ತುಗಳ ಸಂಗ್ರಹ ಹಾಗೂ ವಿತರಣೆ, ಸಿದ್ಧಉಡುಪುಗಳ ತಯಾರಿಕೆ ಹಾಗೂ ಮಾರಾಟ, ಸಭೆ ಸಮಾರಂಭಗಳ ವ್ಯವಸ್ಥೆ (ಇವೆಂಟ್ ಮೆನೆಜಮೆಂಟ್) ಶೈತ್ಯಾಗಾರಗಳ ಮೂಲಕ ವಸ್ತು ಸಂಗ್ರಹಣೆ, ವೈದ್ಯಕೀಯ ಸೌಲಭ್ಯಗಳು, ಔಷಧಗಳ ತಯಾರಿಕಾ ಘಟಕಗಳು, ಸಾವಯವ ಕೃಷಿ ಕ್ಷೇತ್ರ, ಹಾಗೂ ವಿತರಣಾ ಕೇಂದ್ರಗಳು, ಸಸ್ಯ ಸಂರಕ್ಷಣೆ ಹಾಗೂ ವಿತರಣೆ ಹೀಗೆ ಇನ್ನೂ ಹಲವು ಕ್ಷೇತ್ರಗಳನ್ನು ಸಹಕಾರ ಕ್ಷೇತ್ರದ ಕಕ್ಷೆಗೆ ಒಳಪಡಿಸಬೇಕಿದೆ.

ಯುವಕರಿಗೆ ಹಾಗೂ ಮಹಿಳೆಯರಿಗೆ ಈ ಕ್ಷೇತ್ರದ ಬಗ್ಗೆ ತಿಳುವಳಿಕೆ ನೀಡಿ ಅವರನ್ನು ಈ ಕ್ಷೇತ್ರಕ್ಕೆ ಕರೆತರುವ ವ್ಯವಸ್ಥೆಯೂ ಆಗಬೇಕಿದೆ. ಇದರಿಂದಾಗಿ ಸಹಕಾರ ಕ್ಷೇತ್ರದ ಮೂಲಕ ಹೆಚ್ಚು ಜನರಿಗೆ ಉದ್ಯೋಗವನ್ನು ಸಹ ಕಲ್ಪಿಸಬಹುದಾಗಿದೆ. ಈಗಾಗಲೇ ಸಹಕಾರ ಕ್ಷೇತ್ರ ಆವರಿಸಿದ ಹಲವು ಕ್ಷೇತ್ರಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸದಿರುವುದೂ ಅವುಗಳನ್ನು ಬಲಪಡಿಸುವ ಅಗತ್ಯವಿದೆ. ಈ ಬಗ್ಗೆ ಚಿಂತನೆ ಹಾಗೂ ಕಾರ್ಯಯೋಜನೆ ಅವಶ್ಯಕ.

ಸೌಹಾರ್ದ ಸಹಕಾರಿ ಕ್ಷೇತ್ರದಲ್ಲೂ ಸಹ ಗೃಹ ನಿರ್ಮಾಣ ಸಹಕಾರ ಚಟುವಟಿಕೆಯೊಂದನ್ನು ಬಿಟ್ಟು ಉಳಿದ ಎಲ್ಲ ಕ್ಷೇತ್ರಗಳಲ್ಲೂ ಕಾರ್ಯನಿರ್ವಹಿಸಲು ಅವಕಾಶವಿದೆ. ಸಹಕಾರಿಗಳು ಕೇವಲ ಸಾಂಪ್ರದಾಯಿಕ ಲೇವಾದೇವಿ ವ್ಯವಹಾರ ಹಾಗೂ ಇತ್ತೀಚೆಗೆ ಪ್ರಾರಂಭಿಸುತ್ತಿರುವ ಬಡ್ಡಿಯೇತರ ಆದಾಯಗಳ ಜೊತೆಗೆ ಹೊಸ ಹೊಸ ಕ್ಷೇತ್ರಗಳಲ್ಲಿ ಸಹಕಾರಿ ಸಂಘಗಳನ್ನು ಹುಟ್ಟು ಹಾಕಿ ಸಹಕಾರಿ ಕ್ಷೇತ್ರವನ್ನು ಬಲಪಡಿಸುವುದರ ಜೊತೆಗೆ ಸದಸ್ಯರ ಆರ್ಥಿಕ ಅಭಿವೃದ್ಧಿಯನ್ನೂ ಸಾಧಿಸಬಹುದಲ್ಲವೇ ?

– ಎಸ್.ಆರ್. ಸತೀಶಚಂದ್ರ

> ಯುವಕರಿಗೆ ಹಾಗೂ ಮಹಿಳೆಯರಿಗೆ ಈ ಕ್ಷೇತ್ರದ ಬಗ್ಗೆ ತಿಳುವಳಿಕೆ ನೀಡಿ ಅವರನ್ನು ಈ ಕ್ಷೇತ್ರಕ್ಕೆ ಕರೆತರುವ ವ್ಯವಸ್ಥೆಯೂ ಆಗಬೇಕಿದೆ. ಇದರಿಂದಾಗಿ ಸಹಕಾರ ಕ್ಷೇತ್ರದ ಮೂಲಕ ಹೆಚ್ಚು ಜನರಿಗೆ ಉದ್ಯೋಗವನ್ನು ಸಹ ಕಲ್ಪಿಸಬಹುದಾಗಿದೆ. ಈಗಾಗಲೇ ಸಹಕಾರ ಕ್ಷೇತ್ರ ಆವರಿಸಿದ ಹಲವು ಕ್ಷೇತ್ರಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸದಿರುವುದೂ ಅವುಗಳನ್ನು ಬಲಪಡಿಸುವ ಅಗತ್ಯವಿದೆ.



# ದರ್ಪಣವೊಂದೆ; ದರ್ಶಕರು ಬೇರೆ ಬೇರೆ

**ಎಚ್. ಶಿವಕುಮಾರ್**
ಚಾರ್ಟೆಡ್ ಅಕೌಂಟೆಂಟ್
shivakumar.h@icai.org

**ಕ**ಳೆದ ಸಂಚಿಕೆಯಲ್ಲಿ ಪ್ರಕಟವಾದ "ಪತ್ತಿನ ಸಹಕಾರಿ ಸಂಘಗಳ ಆದಾಯ ತೆರಿಗೆ ಆಪತ್ತು" ಎಂಬ ಲೇಖನಕ್ಕೆ ಓದುಗರಿಂದ ಮತ್ತು ಸಹಕಾರಿಗಳಿಂದ ದೂರವಾಣಿ, ಪತ್ರಗಳ ಮೂಲಕ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ. ಪತ್ತಿನ ಸಹಕಾರಿ ಸಂಘಗಳು ಸಹಕಾರಿ ಬ್ಯಾಂಕುಗಳಲ್ಲಿ ಮತ್ತು ಸಹಕಾರಿ ಬ್ಯಾಂಕುಗಳಿಗೆ ಅನ್ವಯಿಸುವಂತಹ ಆದಾಯ ತೆರಿಗೆ ಸಹಕಾರಿ ಸಂಘಗಳಿಗೆ ಅನ್ವಯಿಸುವುದು ಸಮಂಜಸವಲ್ಲ ಎಂದು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕಾದ ಅಗತ್ಯವಿದೆ ಎಂದು ನನ್ನ ಅನಿಸಿಕೆಯನ್ನು ಓದುಗರು, ಸಹಕಾರಿಗಳು ಅನುಮೋದಿಸಿದ್ದಾರೆ.

ಸದಸ್ಯರಿಂದ, ಸದಸ್ಯರಿಗಾಗಿ , ಸದಸ್ಯರೇ ತಮ್ಮ ಆಂತರಿಕ ಅಭಿವೃದ್ಧಿಗಾಗಿ ನಡೆಸುತ್ತಿರುವ ಸಹಕಾರಿ ಚಟುವಟಿಕೆಯೇ ಸಹಕಾರಿ ಸಂಘ. ಸಹಕಾರಿ ಸಂಘಗಳು ನಡೆಸುವ ಚಟುವಟಿಕೆ ಆರ್ಥಿಕ ದೃಷ್ಟಿಕೋನದಿಂದ ವಾಣಿಜ್ಯ ಚಟುವಟಿಕೆಗಳಾದರೂ ಸಹಕಾರಿ ಸಂಘಗಳು ವಾಣಿಜ್ಯ ಸಂಸ್ಥೆಗಳಲ್ಲ. ಸಹಕಾರಿ ಚಟುವಟಿಕೆಯ ಮೂಲಕ ಸಂಗ್ರಹವಾದ ಉತ್ಪನ್ನವನ್ನು ಸದಸ್ಯರ ಸರ್ವತೋಮುಖ ಅಭಿವೃದ್ಧಿಗಾಗಿ ಬಳಸುವುದರಿಂದ ಇಂತಹ ಸಹಕಾರಿ ಚಟುವಟಿಕೆಯು ಸಾರ್ವತ್ರಿಕ ಸಂಪನ್ಮೂಲ ಸಂವರ್ಧನ ಸಂಘಟನೆಗಳು ಎಂಬ ಕಾರಣಕ್ಕೆ 80ಪಿ ಮೂಲಕ ತೆರಿಗೆ ವಿನಾಯಿತಿಯನ್ನು ನೀಡಿರುವುದು ಮೂಲ ಉದ್ದೇಶ. ಆದರೆ ಕಾಲ ಬದಲಾದಂತೆ, ಆರ್ಥಿಕ ಬೆಳವಣಿಗೆ ಮತ್ತು ಉದಾರತೆಯು ತೀವ್ರಗೊಂಡ ಪರಿಣಾಮವಾಗಿ, ಸಹಕಾರ, ಕೃಷಿ, ಅರಣ್ಯ, ಮೀನುಗಾರಿಕೆಯಂತ ಎಲ್ಲ ಸ್ತರಗಳಲ್ಲೂ ವಾಣಿಜ್ಯಕರಣದ ಲೇಪನದಿಂದಾಗಿ ಇಂತಹ ಸಂಘಸಂಸ್ಥೆಗಳನ್ನು ನೋಡುವ ದೃಷ್ಟಿಕೋನ ಬದಲಾಗಿದೆ. ಎಲ್ಲವನ್ನು ಹಣ ಸೃಷ್ಟಿಸುವ ತಿರುಗಣಿ ಯಂತ್ರಗಳಂತೆ (Money Spinning) ನೋಡುತ್ತಿರುವ ಫಲವಾಗಿ ಇಂದು ಸಹಕಾರ, ಕೃಷಿ, ಆರೋಗ್ಯ, ವಿದ್ಯೆ, ಕ್ರೀಡೆಗೆ ಸಂಬಂಧಿಸಿದ ಸಂಸ್ಥೆಗಳು ತೆರಿಗೆ ವ್ಯಾಪ್ತಿಗೆ ಬಂದು ನಿಂತುಬಿಟ್ಟಿವೆ. ಇದು ವಾಸ್ತವ.



ಈ ಹಿನ್ನೆಲೆಯಲ್ಲಿ ಪತ್ತಿನ ಸಹಕಾರಿ ಸಂಘಗಳ ತೆರಿಗೆ ಸಮಸ್ಯೆಯನ್ನು ಪರಿಶೀಲಿಸುವುದಾದರೆ : "ದರ್ಪಣವೊಂದೆ; ದರ್ಶಕರು ಬೇರೆ ಬೇರೆ" ಎಂಬಂತೆ ಆದಾಯ ತೆರಿಗೆ ಕಾನೂನು ಪುಸ್ತಕ ಒಂದೇ ಆದರೂ ಅದನ್ನು ಅರ್ಥೈಸಿಕೊಳ್ಳುವ ಜನರು ಬೇರೆ ಬೇರೆ ಆದಂತೆ ವಿಭಿನ್ನ ಅಭಿಪ್ರಾಯಗಳು ಹೊರಬರುತ್ತವೆ. ಸಹಕಾರಿ ಚಳುವಳಿಗೆ ಸಮಗ್ರವಾಗಿ ಅನ್ವಯವಾಗುವ 80ಪಿ ವಿಷಯದಲ್ಲಿ ಇದುವೇ ಆದದ್ದು. ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳ ವ್ಯಾಪ್ತಿಗೆ ಬರುತ್ತಿರುವ ಆದಾಯ ತೆರಿಗೆ ಕಛೇರಿಯಲ್ಲಿ ಕಳೆದ ಒಂದೆರಡು ವರ್ಷಗಳಿಂದ ಅಧಿಕಾರರೂಢರಾಗಿರುವ ಅಪರ ಆದಾಯ ತೆರಿಗೆ ಆಯುಕ್ತರೊಬ್ಬರು ವೈಯಕ್ತಿಕವಾಗಿ ತೆಗೆದುಕೊಂಡ ಅಭಿಪ್ರಾಯದ ಹಿನ್ನೆಲೆಯಲ್ಲಿ ಸಹಕಾರಿ ಬ್ಯಾಂಕುಗಳು ಮತ್ತು ಪತ್ತಿನ ಸಹಕಾರಿ ಸಂಘಗಳನ್ನು 80ಪಿ ದೃಷ್ಟಿಯಲ್ಲಿ ಸಮಾನವಾಗಿ ಪರಿಗಣಿಸಿ ಪತ್ತಿನ ಸಹಕಾರಿ ಸಂಘಗಳಿಗೆ ಅಗತ್ಯವಾಗಿ ಅನ್ವಯವಾಗಬಹುದಾಗಿದ್ದ 80ಪಿ ತೆರಿಗೆ ವಿನಾಯಿತಿಯನ್ನು ತಿರಸ್ಕರಿಸಲಾಗುತ್ತಿದೆ.

ತಿರಸ್ಕೃತ ತೆರಿಗೆ ವಿನಾಯಿತಿಯ ಔಚಿತ್ಯವನ್ನು ಪ್ರಶ್ನಿಸಿ ಮೊದಲ ಮೇಲ್ಮನವಿ ಮಾಡಿದ ಸಂದರ್ಭದಲ್ಲಿ ಪತ್ತಿನ ಸಹಕಾರಿ ಸಂಘಗಳು ಸಹಕಾರಿ ಬ್ಯಾಂಕುಗಳಲ್ಲ ಎಂಬ ವಾದವನ್ನು ಸೂಕ್ತ ಕಾನೂನು ಪರಾಮರ್ಶೆ ಅಧ್ಯಯನ ಮತ್ತು ದಾಖಲೆಗಳ ಮೂಲಕ ಸಮರ್ಥಿಸಿದಾಗ ಸಂತೃಪ್ತಗೊಂಡ ಮೇಲ್ಮನವಿ ಆಯುಕ್ತರು, ಪತ್ತಿನ ಸಹಕಾರ ಸಂಘಗಳ 80ಪಿ ತೆರಿಗೆ ವಿನಾಯಿತಿಯನ್ನು ಎತ್ತಿ ಹಿಡಿದು ವಿಧಿಸಲ್ಪಟ್ಟ ತೆರಿಗೆಯನ್ನು ಸಂಪೂರ್ಣವಾಗಿ ತೆಗೆದು ಹಾಕುವಂತೆ ನೀಡಿದ ಲಿಖಿತ ಆದೇಶವನ್ನು ಆದಾಯ ತೆರಿಗೆ ಇಲಾಖೆ, ಈಗ ಮರು ಮೇಲ್ಮನವಿ ಮಾಡಿ ತೆರಿಗೆ ನ್ಯಾಯ ಮಂಡಳಿಗೆ ಪ್ರಕರಣವನ್ನು ವರ್ಗಾಯಿಸಿರುವ ಉದಾಹರಣೆ ದಾಖಲಾಗಿದೆ.

ತೆರಿಗೆ ವಿಧಿಸುವುದು ನಮ್ಮ ಕರ್ತವ್ಯ, ವಿರೋಧಿಸುವುದು ಅಥವಾ ತೆರವುದು ನಿಮ್ಮ ಕೆಲಸ ಎಂಬ ಅಧಿಕಾರಿಶಾಹಿ ಧೋರಣೆಯೇ ಇಂತಹ ಬಿಕ್ಕಟ್ಟಿಗೆ ಕಾರಣವಾಗಿದೆ. ಯಾವುದೇ ಒಬ್ಬಬ್ಬರು ಉನ್ನತ ದರ್ಜೆಯ ಅಧಿಕಾರಿಯ ವೈಯಕ್ತಿಕವಾಗಿ ಕಾನೂನನ್ನು ಅರ್ಥೈಸುವ ಪರಿಯನ್ನು ಅವಲಂಬಿಸಿ ಕಾನೂನನ್ನು ವಿಕೃತಗೊಳಿಸಿ ಸಹಕಾರಿ ಚಳುವಳಿಗೆ ಆಘಾತವನ್ನು ಸೃಷ್ಟಿಸುತ್ತಿರುವ ಪ್ರಯತ್ನಗಳನ್ನು ಸಹಕಾರಿಗಳೆಲ್ಲರೂ ಪ್ರತಿಭಟಿಸಬೇಕಾಗಿದೆ. ಕರ್ನಾಟಕ ಪತ್ತಿನ ಸಹಕಾರಿ ಸಂಘಗಳ ಪದಾಧಿಕಾರಿಗಳಿಗೆ ತೆರಿಗೆ ಇಲಾಖೆ ಬರೆದಿರುವ ಪತ್ರ 80ಪಿ ತೆರಿಗೆ ವಿನಾಯಿತಿಯನ್ನು ಸಮರ್ಥಿಸುತ್ತಿದ್ದರೂ ಇಂತಹ ಪತ್ರಗಳು ತೆರಿಗೆ ಇಲಾಖೆಯ ಅಧಿಸೂಚನೆ ಅಲ್ಲದೆ ಇರುವುದರಿಂದ ಪತ್ರಗಳು ಸಿಂಧುವಲ್ಲ ಎಂಬ ವಿತಂಡವಾದವನ್ನು ವ್ಯಕ್ತಪಡಿಸುತ್ತಿರುವ ಆದಾಯ ತೆರಿಗೆ ಇಲಾಖೆ ಕ್ರಮವನ್ನು ಒಟ್ಟಾರೆಯಾಗಿ ವಿರೋಧಿಸಬೇಕಿದೆ. ಹಿಂದೊಮ್ಮೆ ಮುಂಬೈನಲ್ಲಿ ವಜ್ರ ವ್ಯಾಪಾರಿಗಳ ಮೇಲೆ ತೆರಿಗೆ ದಾಳಿಗಳು ಅವ್ಯಾಹತವಾಗಿ ನಡೆಯುತ್ತಿರುವಾಗ, ಸಂಘಟಿತರಾದ ವಜ್ರ ವ್ಯಾಪಾರಿಗಳು ಮುಂಬೈ ಆದಾಯ ತೆರಿಗೆ ಮುಖ್ಯ ಆಯುಕ್ತರ ಕಛೇರಿಯೆದುರು ಧರಣಿ ನಡೆಸಿ ಸಾರ್ವಜನಿಕರ ಗಮನ ಸೆಳೆದ ಪರಿಣಾಮವಾಗಿ ವಜ್ರ ವ್ಯಾಪಾರಿಗಳ ಮೇಲೆ ನಡೆಯುತ್ತಿದ್ದ ದಾಳಿಗಳು ನಿಂತು ಹೋದವು. ಇಂತಹ ಅನೇಕ ಪ್ರಕರಣಗಳು ತೆರಿಗೆದಾರರು ಮತ್ತು ತೆರಿಗೆ ಇಲಾಖೆಯ ಮಧ್ಯೆ ನಡೆದು ಹೋಗಿರುವ ಪುರಾವೆಗಳಿವೆ.

ಕಾನೂನು ಕತ್ತೆಯಂತೆ; ಹಿಂದಿದ್ದವರನ್ನು ಒದೆಯುತ್ತದೆ ಮುಂದಿದ್ದವರನ್ನು ಓಲೈಸುತ್ತದೆ ಎಂಬ ಇಂಗ್ಲೀಷ್ ನಾಣ್ನುಡಿಯಿದೆ. 80ಪಿ ವಿಚಾರದಲ್ಲಿ ಇದು ಅಕ್ಷರಶಃ ಸತ್ಯ ಎಂಬುದು ಇತ್ತೀಚಿನ ಪ್ರಕರಣಗಳಿಂದ ಸಾಬೀತಾಗಿದೆ. ಪತ್ತಿನ ಸಹಕಾರಿ ಸಂಘಗಳು ತೆರಿಗೆ ಕಾನೂನಿನ ಹಿಂದೆ ನಿಂತು ಒದೆತಕ್ಕೊಳಗಾಗುವ ಬದಲು ಮುಂದೆ ನಿಂತು ಓಲೈಕೆಗೆ ಅರ್ಹನಾಗಬೇಕಾಗಿದೆ. ಎಲ್ಲಾ ಪತ್ತಿನ ಸಹಕಾರ ಸಂಘಗಳು 80ಪಿ ಅಡಿಯಲ್ಲಿ ತೆರಿಗೆ ವಿನಾಯಿತಿ ಕೋರಿ ರಿಟರ್ನ್ನುಗಳನ್ನು ಸಲ್ಲಿಸಿ ತಗಾದೆ ನೋಟೀಸುಗಳಿಗೆ ಸೂಕ್ತ ಉತ್ತರವನ್ನು ನೀಡುವುದಲ್ಲದೆ ಆದಾಯ ತೆರಿಗೆ ಉನ್ನತ ಅಧಿಕಾರಿಗಳ ಮಟ್ಟದಲ್ಲಿ ಅಧಿಕೃತವಾಗಿ ಸಮಾಲೋಚನಾ ಸಭೆಯೊಂದನ್ನು ನಡೆಸಿ ಸಾಮೂಹಿಕವಾಗಿ ಒತ್ತಡ ತರುವ ಕೆಲಸ ಮಾಡಬೇಕಿದೆ. ಇಂತಹ ಒಂದು ಕ್ರಮ ಈಗಿರುವ ಪ್ರಸ್ತುತದ ಸಮಸ್ಯೆಯನ್ನು ಸರಳಗೊಳಿಸುವುದಲ್ಲದೆ, 2012 ಏಪ್ರೀಲ್ ನಂತರ ಬರಲಿರುವ ಹೊಸ ತೆರಿಗೆ ನೀತಿ ಸಂಹಿತೆಯಿಂದಾಗಿ ಸಂಪೂರ್ಣವಾಗಿ ತೆರಿಗೆಗೊಳಗಾಗಲಿರುವ ಅಪಾಯವನ್ನು ಎದುರಿಸುತ್ತಿರುವ ಸಹಕಾರಿ ಸಮುದಾಯಕ್ಕೆ ಸೂಕ್ತವಾದ ಮತ್ತು ಸಮರ್ಥವಾದ ತೆರಿಗೆ ವಿರೋಧಿ ವೇದಿಕೆಯನ್ನು ಕಲ್ಪಿಸಿಕೊಡಲು ಸಹಾಯಕವಾಗುತ್ತದೆ. ■

# ಪತ್ತಿನ ಸಹಕಾರಿ ಸಂಘಗಳಿಗೆ ಆದಾಯ ತೆರಿಗೆ ಆಪತ್ತು

## 2011ರ ಸೆಪ್ಟೆಂಬರ್ ಲೇಖನಕ್ಕೆ ಪ್ರತಿಕ್ರಿಯೆ

– ಬಿ. ರಾಜಶೇಖರ
ಮುಖ್ಯಕಾರ್ಯನಿರ್ವಾಹಕ,
ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ.. ಸಿಂಧನೂರು

ಸಹಕಾರ ಸಂಘಗಳು ಉಳಿಯಬೇಕು, ಬೆಳೆಯಬೇಕು ಎನ್ನುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಸಹಕಾರ ಸಂಘಗಳಿಗೆ ಆದಾಯ ತೆರಿಗೆಯಲ್ಲಿ 80 ಪಿ(2) (ಎ) (ಐ) ಅನ್ವಯ ಸಂಘಗಳು ಗಳಿಸುವ ನಿವ್ವಳ ಆದಾಯದ ಮೇಲೆ ಸಂಪೂರ್ಣ ತೆರಿಗೆ ವಿನಾಯತಿಯನ್ನು ನೀಡಿ ಸಹಕಾರ ಸಂಘಗಳ ಪ್ರೋತ್ಸಾಹಕ್ಕೆ ಕಾರಣವಾಗಿದೆ. ಸಹಕಾರ ಸಂಘಗಳು ತನ್ನ ಸದಸ್ಯರ ಸೇವೆಯಲ್ಲಿ ತೊಡಗಿಸಿಕೊಳ್ಳುವುದರಿಂದ ದೇಶದಲ್ಲಿ ಸರ್ಕಾರಗಳು ಮಾಡಲು ಸಾಧ್ಯವಾಗದಂತಹ ಅನೇಕ ಸೇವಾ ಕಾರ್ಯಗಳನ್ನು ಸಹಕಾರಿಗಳು ಮಾಡುತ್ತಿರುವ ಹಿನ್ನೆಲೆಯಲ್ಲಿ ತೆರಿಗೆ ವಿನಾಯಿತಿಯನ್ನು ನೀಡುವ ಮೂಲಕ ಸಹಕಾರಿ ಕ್ಷೇತ್ರವನ್ನು ಪ್ರೋತ್ಸಾಹಿಸಲಾಗುತ್ತದೆ.

ಆದಾಯ ತೆರಿಗೆ ವಿನಾಯಿತಿಯನ್ನು ನೀಡಿರುವ ಮೂಲ ಉದ್ದೇಶವೇ ಸಹಕಾರಿಗಳು ತನ್ನ ಸೇವೆಯನ್ನು ತನ್ನ ಸದಸ್ಯರಿಗೆ ಮೀಸಲಿಟ್ಟಿರುವುದೆ ಮೂಲ ಕಾರಣ ಆದರೆ ಇತ್ತೀಚೆಗೆ ಸಹಕಾರಿ ಬ್ಯಾಂಕ್‌ಗಳಿಗೆ ಆದಾಯ ತೆರಿಗೆಯನ್ನು ವಿಧಿಸಿರುವ ಮೂಲ ಕಾರಣ ಸಹಕಾರಿ ಬ್ಯಾಂಕ್‌ಗಳು ಸದಸ್ಯೇತರರಿಗೆ ಸೇವೆಯನ್ನು ನೀಡುತ್ತಿರುವ ಕಾರಣ ಸಹಕಾರಿ ತತ್ವದ ಮೂಲ ಉದ್ದೇಶಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಿರುವ ಹಿನ್ನಲಯಲ್ಲಿ ಐದು ವರ್ಷಗಳ ಹಿಂದೆ ಕೇಂದ್ರ ಸರ್ಕಾರ ಸಹಕಾರಿ ಬ್ಯಾಂಕಗಳಿಗೆ ಆದಾಯ ತೆರಿಗೆಯನ್ನು ವಿಧಿಸಿದೆ. ಬಹಳಷ್ಟು ಸಂದರ್ಭಗಳಲ್ಲಿ ಪತ್ತಿನ ಸಹಕಾರ ಸಂಘಗಳಿಗೂ ಸಹಕಾರಿ ಬ್ಯಾಂಕಗಳಿಗೂ ವ್ಯತ್ಯಾಸ ತಿಳಿಯದ ಆದಾಯ ತೆರಿಗೆ ಇಲಾಖೆಯ ಕೆಲ ಅಧಿಕಾರಿಗಳು ಸಹಕಾರ ಸಂಘಗಳಲ್ಲಿ ಹಣಕಾಸು ವ್ಯವಹಾರ ನಡೆಯುತ್ತಿದೆ ಎನ್ನುವ ಕಾರಣಕ್ಕೆ ಎಲ್ಲಾ ಪತ್ತಿನ ಸಹಕಾರಿಗಳನ್ನು ಬ್ಯಾಂಕಗಳು ಪರಿಗಣಿಸಿರುವುದೆ ಸಮಸ್ಯೆಗೆ ಮೂಲ ಕಾರಣವಾಗಿದೆ.

ಬ್ಯಾಂಕಗಳು ಎಂದು ಸಹಕಾರಿ ಸಂಘಗಳು ಕರೆದುಕೊಳ್ಳಬೇಕಾದರೆ ಅಂತಹ ಸಂಘಗಳಿಗೆ "ಬ್ಯಾಂಕಿಂಗ್ ರೆಗ್ಯೂಲೇಷನ್ ಆಕ್ಟ್ 1949" (ಬ್ಯಾಂಕ್ ವ್ಯವಹಾರಗಳ ನಿಯಂತ್ರಣ ಅಧಿನಿಯಮ 1949)ನಲ್ಲಿ ಬ್ಯಾಂಕ್ ಎಂದರೆ ಏನು ಎನ್ನುವುದನ್ನು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ ಮತ್ತು ಒಂದು ಸಹಕಾರಿ ಬ್ಯಾಂಕನ್ನು ಆರಂಭಿಸಬೇಕಾದರೆ ಅದರ ಅಧಿನಿಯಮದಲ್ಲಿ ಸೂಚಿಸಿರುವ ಹಾಗೂ ವಿಧಿಸಿರುವ ಕಟ್ಟಳೆಗಳನ್ನು ಪೂರೈಸಿದಾಗ ಮಾತ್ರ "ಭಾರತೀಯ ರಿಸರ್ವ ಬ್ಯಾಂಕ್" ಸಹಕಾರ ಸಂಘಗಳಿಗೆ ಬ್ಯಾಂಕ ತೆರೆಯಲ್ಲು ಬ್ಯಾಂಕಿಂಗ್ ವ್ಯವಹಾರವನ್ನು ನಡೆಸಲು ಪರವಾನಗಿಯನ್ನು ನೀಡುತ್ತದೆ ಹಾಗ ಮಾತ್ರ ಸಹಕಾರಿ ಸಂಘವೊಂದು ಬ್ಯಾಂಕ್ ಆಗಲು ಸಾಧ್ಯವೆ ವಿನಹ: ಆದಾಯ ತೆರಿಗೆ ಕೆಲ ಅಧಿಕಾರಿ ಹೇಳಿದ ಮಾತ್ರಕ್ಕೆ ಪತ್ತಿನ ಸಹಕಾರ ಸಂಘವೊಂದು ಬ್ಯಾಂಕ್ ಎಂದು ಪರಿಗಣಿಸಲು ಹೇಗೆ ಸಾಧ್ಯ?

ಇಲ್ಲಿ ಬ್ಯಾಂಕ್ ಮಾಡುವ ಕಾರ್ಯಕ್ಕೂ ಪತ್ತಿನ ಸಹಕಾರಿ ಮಾಡುವ ಸೇವಾ ಕಾರ್ಯಕ್ಕೂ ಸಾಕಷ್ಟು ವ್ಯತ್ಯಾಗಳಿದ್ದು ಅದು ಸಹಜವಾಗಿ ನೋಡುವವರ ಕಣ್ಣಿಗೆ ಕಾಣಲು ಸಾಧ್ಯವಿಲ್ಲ. ಸಹಕಾರಿ ಬ್ಯಾಂಕನ್ನು "ಭಾರತೀಯ ರಿಸರ್ವ ಬ್ಯಾಂಕ್" ಸಂಪೂರ್ಣ ವಾಗಿ ನಿಯಂತ್ರಣಕ್ಕೆ ಒಳಪಡಿಸಿದ್ದು ತನ್ನ ಆಧೇಶಕ್ಕೆ ಅನುಗುಣವಾಗಿ ಬ್ಯಾಂಕಿಂಗ್ ವ್ಯವಹಾರವನ್ನು ಮಾಡುವಂತೆ ನೋಡಿಕೊಳ್ಳುವ ಜವಾಬ್ದಾರಿ ರಿಜರ್ವ ಬ್ಯಾಂಕಿನದಾಗಿರುತ್ತದೆ. ಆದರೆ ಪತ್ತಿನ ಸಹಕಾರ ಸಂಘಗಳು ಕೇವಲ ತನ್ನ ಹಿತಿಮಿತಿಯಲ್ಲಿ ತನ್ನದೆ ಆದ ಕೆಲ ನಿಭಂದನೆಗಳನ್ನು ರಚಿಸಿಕೊಂಡು




ತನ್ನ ಸದಸ್ಯರಿಗೆ ಮಾತ್ರ ಸೇವೆಯನ್ನು ಮಾಡುತ್ತಾ ಬರುತ್ತಿವೆ. ಕಾಯ್ದೆಗಳ ಆಧ್ಯಾಯನದ ಕೊರತೆಯಿಂದ ಕೆಲ ವ್ಯಕ್ತಿಗಳು ಆದಾಯ ತೆರಿಗೆ ಅಧಿಕಾರಿಗಳ ಮುಂದೆ ಸಹಕಾರಿ ಕಾಯ್ದೆಯನ್ನು ಹಾಗೂ ಸಹಕಾರ ಸಂಘಗಳಿಗೆ ಇರುವ ವಿನಾಯತಿಯನ್ನು ಸಮರ್ಥಿಸಿಕೊಳ್ಳುವಲ್ಲಿ ಯಶಸ್ವಿಯಾಗಿಲ್ಲ ಎನ್ನಬಹುದು.

ಸಹಕಾರಿ ಸಂಘಗಳಿಗೆ ಜನ್ಮಾತ ಬಂದಿರುವ ಆದಾಯ ತೆರಿಗೆ ವಿನಾಯಿತಿಯು ಇನ್ನು ಜೀವಂತವಾಗಿರುವಾಗಲೆ ಕೆಲ ಅಧಿಕಾರಿಗಳು ಹಾಗೂ ಕೆಲ ಪಟ್ಟಭದ್ರ ಹಿತಾಸಕ್ತಿಗಳು ವಿಶೇಷವಾಗಿ ರಾಜ್ಯದಲ್ಲಿ ಒಂದು ರೀತಿಯಲ್ಲಿ ಉಯಿಲೆಬ್ಬಿಸುತ್ತಾ ಪತ್ತಿನ ಸಹಕಾರ ಸಂಘಗಳಿಗೆ ಆದಾಯ ತೆರಿಗೆ ವಿನಾಯಿತಿಯನ್ನು ಪಡೆಯಲು ಅರ್ಹವಾಗಿಲ್ಲ ಎಂದು ಪ್ರಚಾರದಲ್ಲಿ ತೊಡಗಿವೆ? 2012 ರ ಕೇಂದ್ರ ಮುಂಗಡ ಪತ್ರದಲ್ಲಿ ನೇರ ತೆರಿಗೆ ಪದ್ದತಿ ಅಳವಡಿಕೆಯ ಸಂದರ್ಭದಲ್ಲಿ ಎಲ್ಲಾ ಸಹಕಾರಿ ಸಂಘಗಳಿಗೆ ಈಗ ನೀಡಿರುವ ಆದಾಯ ತೆರಿಗೆ ವಿನಾಯಿತಿಯನ್ನು ರದ್ದುಪಡಿಸಿದರೆ ಮಾತ್ರ ತೆರಿಗೆ ವ್ಯಾಪ್ತಿಗೆ 2012ರ ಏಪ್ರೀಲ್‌ನಿಂದ ಬರುವ ಸಾಧ್ಯತೆಗಳಿವೆ.

ಮುಖ್ಯವಾಗಿ ಸಹಕಾರಿ ಸಂಸ್ಥೆಯನ್ನು ನಡೆಸುವ ಆಡಳಿತ ಮಂಡಳಿ ಹಾಗೂ ಮುಖ್ಯ ಕಾರ್ಯನಿರ್ವಾಹಕರು ಕನಿಷ್ಠ ಕಾಯ್ದೆಗಳ ಆಧ್ಯಾಯ ಮಾಡದಿದ್ದರೆ ತೊಂದರೆಗೊಳಗಾಗಬೇಕಾಗುತ್ತದೆ. ಇದರ ಜೊತೆಗೆ ಸೌಹಾರ್ದ ಸಹಕಾರಿಗಳ ಅಥವಾ ಪತ್ತಿನ ಸಹಕಾರಿ ಸಂಸ್ಥೆಗಳ ಲೆಕ್ಕ ಪರಿಶೋಧನೆ ಮಾಡುವ ಲೆಕ್ಕಪರಿಶೋಧಕರು ಸಹ ಸೆಕ್ಸನ್ 80 ಪಿ. (2) (ಎ) (ಐ) ಅನ್ವಯ ಆದಾಯ ತೆರಿಗೆ ಅನ್ವಯಿಸುವುದಿಲ್ಲವೆಂಬುದನ್ನು ತಿಳಿದಿರಬೇಕಾಗುತ್ತದೆ. ಈ ಬಗ್ಗೆ ದಿನಾಂಕ 22/9/2006 ರಂದು ಭಾರತ ಸರಕಾರದ ಆದಾಯ ತೆರಿಗೆ ಇಲಾಖೆಯಿಂದ ಶ್ರೀ ಗುರುನಾಥ ಜ್ಯಾಂತಿಕರ ಪ್ರಧಾನ ಕಾರ್ಯದರ್ಶಿ ಕರ್ನಾಟಕ ಕ್ರೆಡಿಟ್ ಸೊಸೈಟೀಸ್ ಅಸೋಸಿಯೇಶನ್ ಇವರಿಗೆ ಬಂದಿರುವ ಪತ್ರ ಮತ್ತು ಶ್ರೀ ಮನೋಹರ ಮಸ್ಕಿ ಎಮ್.ಎಲ್.ಸಿ ಮಾಜಿ ಅದ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಯಿವರಿಗೆ ದಿನಾಂಕ 9 ಜೂನ 2008 ರಂದು ನ್ಯಾಶನಲ್ ಫೆಡರೇಶನ್ ಆಫ್ ಅರ್ಬನ್ ಕೊ-ಆಪರೇಟಿವ್ ಬ್ಯಾಂಕ್ಸ ನಿ ನವದೆಹಲಿ ಯವರಿಗೆ ಸಿಬಿಡಿಟಿಯಿಂದ ಬಂದಿರುವ ವಿವರಣೆ ಪತ್ರವನ್ನು ಈ ಹಿಂದೆ ಜುಲೈ 2008 ರ ಸ್ವಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ಪತ್ತಿನ ಸಹಕಾರಿ ಸಂಸ್ಥೆಗಳು ಒದಿಕೊಳ್ಳಬಹುದಾಗಿದೆ.

■

### ಓದುಗರ ಗಮನಕ್ಕೆ

ಪತ್ತಿನ ಸಹಕಾರಿ ಸಂಘಗಳಿಗೆ ಆದಾಯ ತೆರಿಗೆ ಆಪತ್ತು, 2011ರ ಸೆಪ್ಟೆಂಬರ 11 ಲೇಖನವು ಲೇಖಕರ ಅಭಿಪ್ರಾಯ ಹಾಗೂ ಅವರು ಲೆಕ್ಕ ಪರಿಶೋಧನೆ ಮಡುತ್ತಿರುವ ಪತ್ತಿನ ಸಹಕಾರಿ ಸಂಸ್ಥೆಗಳಿಗೆ ಅನ್ವಯಿಸುತ್ತದೆ ಹೊರತು ಪತ್ರಿಕೆಯ ಅಭಿಪ್ರಾಯವಲ್ಲ. ಪತ್ತಿನ ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ಪಾವತಿ ಅನ್ವಯಿಸುವುದಿಲ್ಲ ಎಂಬ ಬಗ್ಗೆ ಆದಾಯ ತೆರಿಗೆ ಇಲಾಖೆಯ ವಿವರಣೆ ಇರುವಾಗ ಮಾಹಿತಿ ತಿಳಿಯದ / ಗೊತ್ತಿರದ ಅಧಿಕಾರಿಗಳಿಗೆ ಸರಿಯಾದ ಮಾಹಿತಿಯನ್ನು ಒದಗಿಸುವುದು ಸಂಸ್ಥೆಯನ್ನು ನಡೆಸುವ ಆಡಳಿತ ಮಂಡಳಿ, ಮುಖ್ಯ ಕಾರ್ಯನಿರ್ವಾಹಕರು ಹಾಗೂ ಸಹಕಾರಿಯ ಲೆಕ್ಕಪರಿಶೋಧನೆ ಮಾಡುವ ಲೆಕ್ಕ ಪರಿಶೋಧಕರ ಜವಾಬ್ದಾರಿ. ಆದಾಯ ತೆರಿಗೆ ಇಲಾಖೆಗೆ ಸೂಕ್ತ ರೀತಿಯಲ್ಲಿ ವಿಷಯ ಮಂಡಿಸಿ ಮನವರಿಕೆ ಮಾಡಿಸಿದಾಗ ಈ ರೀತಿಯ ಸಮಸ್ಯೆಗಳು ಉದ್ಭವಿಸುವುದಿಲ್ಲ ಎಂಬುದನ್ನು ಓದುಗರು ಗಮನಿಸುವುದು.

– ಸಂಪಾದಕರು



ಕರ್ನಾಟಕ ಸ್ಟೇಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟೀಸ್ ಅಸೋಶಿಯೇಷನ್ ಪದಾಧಿಕಾರಿಗಳು ಕೇಂದ್ರ ಕೃಷಿ ಸಚಿವ ಶರದ್ ಪವಾರ್ ಅವರನ್ನು ಭೇಟಿಯಾದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಸತೀಶ್‌ಚಂದ್ರ ರೊಂದಿಗೆ ಕರ್ನಾಟಕ ಕ್ರೆಡಿಟ್ ಅಸೂಸಿಯೇಶನ್ ಅಧ್ಯಕ್ಷ ಶ್ರೀರಾವಸಾಹೇಬ ಪಾಟೀಲ, ಪ್ರಧಾನ ಕಾರ್ಯದರ್ಶಿ ಶ್ರೀ ಗುರುನಾಥ ಜ್ಯಾಂತೀಕರ, ನಿರ್ದೇಶಕ ಶ್ರೀ ಸಾಗರ ಖವಜ ಮುಂತಾದವರಿದ್ದಾರೆ.



ಬೆಂಗಳೂರಿನ ಉದಯ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಗುಂಡುರಾವ್ ಅವರು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಸತೀಶ್‌ಚಂದ್ರ ಅವರಿಗೆ ಶಿಕ್ಷಣ ನಿಧಿ ಚೆಕ್ ನೀಡುತ್ತಿರುವ ಸಂದರ್ಭದಲ್ಲಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಪಾಟೀಲ್ ಇದ್ದಾರೆ.



ಚಾಮರಾಜ ನಗರದ ಸಂತೇಮರಳ್ಳಿಯ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಉದ್ಘಾಟನಾ ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ಉಪ ಪ್ರದಾನ ವ್ಯವಸ್ಥಾಪಕ ಶ್ರೀ ಕುಮಾರ್ ಅವರು ಮಾತನಾಡುತ್ತಿರುವುದು.



ವಿಜಾಪುರದ ಶಿವಗಿರಿ ಸೌಹಾರ್ದ ಪತ್ತಿನ ಸಹಕಾರಿ ನಿ., ಇದರ 3ನೇ ವರ್ಷದ ಸರ್ವಸದಸ್ಯರ ಸಾಮಾನ್ಯ ಸಭೆಯನ್ನು ಸಹಕಾರಿ ನಿರ್ದೇಶಕ ಹಾಗೂ ವಿಧಾನಪರಿಷತ್ ಸದಸ್ಯ ಶ್ರೀ ಅರುಣಶಹಪುರ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳು ಹಾಜರಿದ್ದರು.

## 58ನೇಯ ಅಖಿಲಭಾರತ ಸಹಕಾರ ಸಪ್ತಾಹ 2011 — 14–11–2011 ರಿಂದ 20–11–2011ರವರೆಗೆ

### ಧ್ಯೇಯ: ಸಹಕಾರ ಸಂಘಗಳ ಮೂಲಕ ಸರ್ವಾಂಗೀಣ ಅಭಿವೃದ್ಧಿ Inclusive Development through Co-operatives



14–11–2011 Co-operative Demovracy,Leadership and self reliance Day
ಸಹಕಾರ ಪ್ರಜಾಪ್ರಭುತ್ವ, ನಾಯಕತ್ವ ಮತ್ತು ಸ್ವಾವಲಂಬಿ ದಿನ

15–11–2011 Co-operative Marketing, Processing and consumer Day
ಸಹಕಾರ ಮಾರಾಟ, ಸಂಸ್ಕರಣೆ ಮತ್ತು ಗ್ರಾಹಕರ ದಿನ

16–11–2011 Shelter and living Environment through Cooperatives.
ಸಹಕಾರಿ ಸಂಘಗಳ ಮೂಲಕ ಆಶ್ರಯ ಮತ್ತು ಜೀವನ ಪರಿಸರ ದಿನ

17–11–2011 Co-operatives affordable Credit and other financial Services Day
ಸಹಕಾರಿ ಸುಲಭ ಸಾಲ ಮತ್ತು ಇತರೆ ಆರ್ಥಿಕ ಸೇವಾ ದಿನ

18–11–2011 Empowerment of Womrn,Youth and Weaker section through Cooperative Day
ಸಹಕಾರಿ ಸಂಘಗಳ ಮೂಲಕ ಮಹಿಳಾ ಸಬಲೀಕರಣ,ಯುವಜನ ಹಾಗೂ ದುರ್ಬಲರ ಸಹಕಾರ ದಿನ

19–11–2011 Cooperatives values,principles and GoodGovernnance Day
ಸಹಕಾರಿ ಮೌಲ್ಯಗಳು, ತತ್ವಗಳು ಮತ್ತು ಉತ್ತಮ ಆಡಳಿತ ದಿನ

20–11–2011 Cooperatives Human Resource Development and Cooperation among Cooperatives Day
ಸಹಕಾರ ಸಂಘಗಳ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸಹಕಾರ ಸಂಘಗಳ ನಡುವೆ ಸಹಕಾರ ದಿನ

# ದಿ ಪಾವಗಡ ಸೌಹಾರ್ದ ಕ್ರೆಡಿಟ್ ಕೊ-ಆಪರೇಟಿವ್‌ಗೆ 10 ವರ್ಷಗಳಲ್ಲಿ 11 ಶಾಖೆಗಳು ಪ್ರತಿ ತಿಂಗಳು 4 ಲಕ್ಷ ರೂ.ಗಳ ಬಡ್ಡಿಯೇತರ ಆದಾಯ ಹಾಗೂ 1.27,82,699 ರೂ.ಗಳ ಲಾಭ ಸದಸ್ಯರಿಗೆ 13% ಡಿವಿಡೆಂಡ್

- ಬಿ.ಎಚ್. ಕೃಷ್ಣರೆಡ್ಡಿ

ದಿನಾಂಕ 17/9/2011 ರಂದು ಕೊರಟಗೆರೆಯ ಕನ್ನಿಕಾ ಮಹಲನಲ್ಲಿ ನಡೆದ 10 ನೇ ಸಾಮಾನ್ಯ ಸಬೆಯಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರ ಅಧ್ಯಕ್ಷತೆಯಲ್ಲಿ 10 ನೇ ಸಾಮಾನ್ಯ ಸಭೆಯು ನಡೆದು ಸಹಕಾರಿಯು ಪ್ರಸಕ್ತ ಸಾಲಿನಲ್ಲಿ 1.27,82,699 ರೂಗಳ ಲಾಭಗಳಿಸಿರುವುದಾಗಿ ತಿಳಿಸಿದರು. ಸಭೆಗೆ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ಭಾಗವಹಿಸಿ ಸಹಕಾರಿಯ ಪ್ರಗತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಪ್ರಗತಿಗಾಗಿ ಶ್ರಮಿಸಿದ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿವರ್ಗ ಮತ್ತು ಸಹಕರಿಸಿದ ಎಲ್ಲ ಸದಸ್ಯರಿಗೂ ಅಭಿನಂದನೆ ಸಲ್ಲಿಸಿ ಶುಭಹಾರೈಸಿದರು. ಈ ಸಹಕಾರಿಯು ರಾಜ್ಯದ ಕಾರ್ಯವ್ಯಾಪ್ತಿಯನ್ನು ಹೊಂದಿದ್ದು ಕೋಲಾರದಲ್ಲಿ ತನ್ನ ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡಿದೆ. ಪ್ರಸಕ್ತ 11 ಶಾಖೆಗಳನ್ನು ಹೊಂದಿದೆ. 6657 ಸದಸ್ಯರು, 1,39,41,400 ಶೇರು ಬಂಡವಾಳ,22.03 ಕೋಟಿ ರೂಗಳ ಠೇವಣಿ, 23,49 ಕೊಟಿ ರೂಗಳ ಸಾಲಗಳು ಇದ್ದು 58 ಜನ ಸಿಬ್ಬಂದಿಯವರು ಸಹಕಾರಿಯ ಪ್ರಗತಿಗೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ತಿಳಿಸಿದರು.



# ಸರಸ್ವತಿ ಸೌಹಾರ್ದ ಸಹಕಾರಿ ತೀರ್ಥಹಳ್ಳಿ ಸದಸ್ಯರಿಗೆ 15% ಡಿವಿಡೆಂಡ್




ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಕೇವಲ 8 ತಿಂಗಳಿನಿಂದ ಕಾರ್ಯನಿರ್ವಹಿಸುತ್ತಿರುವ ಸರಸ್ವತಿ ಸೌಹಾರ್ದ ಸಹಕಾರಿಯು ದಿನಾಂಕ 27/08/2011 ರಂದು ನಡೆದ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯಲ್ಲಿ ತನ್ನ ಸದಸ್ಯರಿಗೆ ಶೇಕಡಾ 15 ರಷ್ಟು ಡಿವಿಡೆಂಡ್ ಘೋಷಣೆ ಮಾಡಿದೆ.

ಸಾಮಾನ್ಯ ಸಭೆಯಲ್ಲಿ ಹಿರಿಯ ಸಹಕಾರಿ ಹಾಗೂ ಮ್ಯಾಮ್ಕೋ ಉಪಾಧ್ಯಕ್ಷ ಶ್ರೀ ನರಸಿಂಹ ನಾಯಕ , ಕ್ಯಾಮ್ಕೊ ನಿರ್ದೇಶಕ ಶ್ರೀಹೆಚ್.ಎಮ್.ಮಹಾಬಲ ಭಟ್, ಟಿ. ಎ.ಪಿ.ಸಿ.ಎಮ್.ಎಸ್. ಅಧ್ಯಕ್ಷ ಶ್ರೀ ನಾಗರಾಜ ಶೆಟ್ಟಿ, ಶ್ರೀ ಬಿಳಿಮಗೆ ರತ್ನಾಕರ ಮುಂತಾದವರು ಉಪಸ್ಥಿತರಿದ್ದರು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷ ಶ್ರೀ ಬಾಳೆಬೈಲು ರಾಘವೇಂದ್ರ ವಹಿಸಿದ್ದರು.

# ಗಂಗಾವತಿ ತಾಲ್ಲೂಕಿನಲ್ಲಿ ತರಬೇತಿ ಕಾರ್ಯಕ್ರಮ

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರ ಮುಖ್ಯ ಕಾರ್ಯನಿರ್ವಹಣಾಧಿಕಾರಿ / ವ್ಯವಸ್ಥಾಪಕರುಗಳು ಹಾಗೂ ಸಿಬ್ಬಂದಿಯವರಿಗಾಗಿ ಏರ್ಪಡಿಸಿದ್ದ ತರಬೇತಿ ಶಿಬಿರವನ್ನು ದಿನಾಂಕ 6/9/2011 ರಂದು ಇಲ್ಲಿನ ಕನ್ನಡ ಜಾಗೃತಿ ಭವನದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀಸಣ್ಣಸೂಗಪ್ಪರವರು ಉದ್ಘಾಟಿಸಿ ಸಹಕಾರ ಕ್ಷೇತ್ರದಲ್ಲಿ ವಿಷಯಗಳ ಜ್ಞಾನವಿಲ್ಲದೆ ಯಾವ ಅಭಿವೃದ್ಧಿಯನ್ನು ಸಾಧಿಸಲಿಕ್ಕಾಗದು. ವಿಷಯ ಜ್ಞಾನ ಸಂಗ್ರಹಣೆಗೆ ಇಂತಹ ತರಬೇತಿ ಕಾರ್ಯಕ್ರಮಗಳು ಪೂರಕ ಎಂದು ತಿಳಿಸಿಶಿಸ್ತು ಮತ್ತು ಪ್ರಾಮಾಣಿಕತೆ ಸಹಕಾರಿ ಕ್ಷೇತ್ರದ ಅಭಿವೃದ್ದಿಗಾಗಿ ಸಹಕಾರಿಗಳೆಲ್ಲರೂ ರೂಢಿಸಿಕೊಳ್ಳುವುದು ಅಗತ್ಯ ಎಂದು ತಿಳಿಸಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಕೊಪ್ಪಳ ಜಿಲ್ಲಾ ಸಹಕಾರ ಯುನಿಯನ್ ಅಧ್ಯಕ್ಷ ಶ್ರೀ ಶೇಖರಗೌಡ ಮಾಲಿಪಾಟೀಲ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸ್ಪಂದನಾ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ನಾಗಲಿಂಗಪ್ಪ ಪತ್ತಾರ,ಸಹಕಾರ ಸಂಘಗಳ ಸಹಾಯಕ ನಿಬಂಧಕ ಶ್ರೀ ಜೆ.ಬಿ.ಆಲದಕಟ್ಟಿ, ಶ್ರೀ ಹೆಚ್.ವೀರೇಶಪ್ಪ, ಶ್ರೀ ಬಿ.ಕಲ್ಮೇಶ ಶ್ರೀ ಜಿ.ಶ್ರೀಧರ ಸಹಾಯಕ ಸಹಕಾರ ಶಿಕ್ಷಣಾಧಿಕಾರಿ ಶ್ರೀ ಎ.ಎಸ್.ಕುದರಿ, ಮುಖ್ಯಕಾರ್ಯ ನಿರ್ವಹಣಾಧಿಕಾರಿ ಶ್ರೀ ಶರಣಬಸಪ್ಪ ಕಾಟ್ರಳ್ಳಿ ಶ್ರೀ ಎಮ್.ಕೊಟ್ರೇಶಿ ಮುಂತಾದ ಗಣ್ಯರು ಭಾಗವಹಿಸಿದ್ದರು.



# ಸೌಹಾರ್ದ ಕಾಯಿದೆಯಡಿ ಸಂಯುಕ್ತ ಸಹಕಾರಿಯ ನಿಬಂಧಕರ ಕಾರ್ಯ ನಿರ್ವಹಣೆ



**ಸಿ.ಎನ್. ಪರಶಿವಮೂರ್ತಿ**
ಸಹಕಾರ ಸಂಘಗಳ
ನಿವೃತ್ತ ಅಪರ ನಿಬಂಧಕರು

...ಹಿಂದಿನ ಸಂಚಿಕೆಯಿಂದ

ಸಂಘಗಳಲ್ಲಿ ಮಾತ್ರ. ಆದ್ದರಿಂದ ಚುನಾವಣೆ ಮುಂದೂಡಿಕೆ , ಸಾಲ/ಬಡ್ಡಿ ಮನ್ನಾ ಯೋಜನೆಗಳಂತಹ ಕ್ರಮಗಳನ್ನು ಬಿಟ್ಟರೆ ರಾಜಕೀಯ ಪ್ರೇರಿತವಾದ ಸರ್ಕಾರಿ ಹಸ್ತಕ್ಷೇಪದ ಉದಾಹರಣೆಗಳು ಕೆಲವು ಸಂಘಗಳಿಗೆ ಮಾತ್ರ ಸೀಮಿತವಾದದ್ದು. ಆದರೆ ಲೆಕ್ಕಪತ್ರಗಳಿಗೆ ಸಂಬಂಧಿಸಿದ್ದು ಶೇ 100ರಷ್ಟು ಎಲ್ಲ ಸಂಘಗಳಿಗೂ ಅನ್ವಯವಾಗುತ್ತದಷ್ಟೆ. ಹೀಗೆ ಮುಕ್ತ ಆರ್ಥಿಕ ಜಗತ್ತಿನಲ್ಲಿ ಮುಕ್ತವಾಗಿ ವ್ಯವಹರಿಸಲು ಅನುಕೂಲವಾಗುವಂತೆ ಒಂದು ಅವಕಾಶ ಸೌಹಾರ್ದ ಸಹಕಾರಿಗಳಿಗೆ ಸೌಹಾರ್ದ ಕಾಯಿದೆಯಿಂದಾಗಿ ಇದೆ. ಆದರೆ ಮುಕ್ತ ಮಾರುಕಟ್ಟೆ ಎಷ್ಟು ಸುಂದರವಾಗಿ ಕಾಣುತ್ತದೋ ಅಷ್ಟೇ ಕ್ರೂರವೂ ಹೌದು. ಅದಕ್ಷತೆಯನ್ನು ಅದು ಹೊಸಕಿಹಾಕಿಬಿಡುತ್ತದೆ. ದಕ್ಷತೆ ಎಂಬ ಒಂದು ಪದದಲ್ಲಿ ಕೇವಲ ಸಾಮರ್ಥ್ಯ ಮಾತ್ರವಲ್ಲದೆ ಉತ್ತಮ ವ್ಯಾವಹಾರಿಕ ನೀತಿಯೂ ಅಡಗಿದೆ. ಈ ವ್ಯಾವಹಾರಿಕ ನೀತಿಯಲ್ಲಿ ವ್ಯಾವಹಾರಿಕ ಪ್ರಾಮಾಣಿಕತೆ (ಹೆಚ್ಚು ಕಾಲ ತಾಳಬೇಕಾದರೆ ಇದು ಬೇಕು), ವ್ಯಾವಹಾರಿಕ ಸೌಜನ್ಯ ಮುಂತಾದುವುಗಳು ಸಹ ಸೇರಿದೆ.

ಇವನ್ನೆಲ್ಲ ಸಾಧಿಸಬೇಕಾದರೆ ಸೌಹಾರ್ದ ಸಹಕಾರಿಯಲ್ಲಿ ಉತ್ತಮ ಆಡಳಿತ ವರ್ಗ ಇರಬೇಕು. ಅದರ ಅಧ್ಯಕ್ಷ ಅಥವಾ ಮುಖ್ಯ ಕಾರ್ಯನಿರ್ವಾಹಕ ಅದಕ್ಕೆ ಉತ್ತಮ ನಾಯಕತ್ವ ನೀಡಬೇಕು. ಅವರಿಗೆ ಸೂಕ್ತ ಸ್ವಾತಂತ್ರನೀಡುವಷ್ಟು ದೂರದರ್ಶಿತ್ವ, ನಂಬಿಕೆ ಮುಂತಾದುವು ಆಡಳಿತ ಮಂಡಳಿಯಲ್ಲಿ ಇರಬೇಕು. ಇಲ್ಲಿ ಒಂದು ಸ್ವಾರಸ್ಯಕರವಾದ ಅಂಶ ಬರುತ್ತದೆ. ಅದೆಂದರೆ ಈ ಅರ್ಜಿತವಾದ ಆದರೆ ವಸೂಲಾಗಿಲ್ಲದ ಬಡ್ಡಿಯ ಪ್ರಶ್ನೆ ಬರುವುದು ಯಾವಾಗ? ಸಂಘದ ವಸೂಲಾತಿ ಚೆನ್ನಾಗಿಲ್ಲದಿದ್ದಾಗ ಅಲ್ಲವೇ? ವಸೂಲಾತಿ ಚೆನ್ನಾಗಿದ್ದರೆ ಅರ್ಜಿತವಾದ ಬಡ್ಡಿಯೆಲ್ಲವೂ ವಸೂಲಾಗಿಯೇ ಬಿಡುತ್ತದೆ ಅಲ್ಲವೇ? ಮೇಲೆ ಹೇಳಿದ ಉತ್ತಮ ಆಡಳಿತ ವರ್ಗ ಇದ್ದರೆ ಅದು ಉತ್ತಮ ಸಾಲನೀಡಿಕೆ ಹಾಗೂ ವ್ಯವಸ್ಥೆಗಳನ್ನು ಇಟ್ಟುಕೊಂಡೇ ಇರುತ್ತದೆ. ಆದ್ದರಿಂದ ನಿಯಮ 22ರ ಪರಿಣಾಮ ಆರ್ಥಿಕ ತ:ಖ್ತೆಗಳ ಮೇಲೆ ಆಗುವುದು ಸಾಲ ವಸೂಲಾತಿ ಅಥವಾ ಹೂಡಿಕೆಗಳ ಮೇಲೆ ಆದ ಬಡ್ಡಿಯ ಸ್ವೀಕೃತಿ ಆಗದೇ ಇದ್ದಾಗ. ಆದ್ದರಿಂದ ನಿಯಮ 22 ಏನು ಮಾಡುತ್ತದೆ ಅಂದರೆ ಅರ್ಥಿಕಪರಿಸ್ಥಿತಿಯನ್ನು ಕೃತಕ ರೀತಿಯಲ್ಲಿ ಸುಂದರವಾಗಿ ಕಾಣಲು ಬಿಡುವುದಿಲ್ಲ. ಅದು ಹೇಗೆ ಇದೆಯೋ ಹಾಗೆ ನೈಜವಾಗಿ ಕಾಣಿಸುತ್ತದೆ.

ನಿಯಮ 22ರ ತರಹದ ಅವಕಾಶವನ್ನು ಮೂಲ ಕಾಯಿದೆಯಲ್ಲಿ ಏಕೆ ಮಾಡಿದ್ದಾರೆ? ಮೂಲ ಸಹಕಾರಿ ತತ್ವಗಳ ಪ್ರಕಾರ ಒಂದು ಸಹಕಾರಿ ಸಂಸ್ಥೆಯು ತನ್ನ ಸದಸ್ಯರ ಆರ್ಥಿಕ ಹಿತಾಸಕ್ತಿಗಳ ಸಾಧನೆಗಾಗಿ ಇರುವ ಸಂಸ್ಥೆ. ಆದ್ದರಿಂದ ಈ ಸಂಸ್ಥೆಯ ಆರ್ಥಿಕ ಪರಿಸ್ಥಿತಿ ತಯಾರಿಸುವಾಗ ಅದು ತನ್ನ ಸದಸ್ಯರ ಮುಂದೆ ಇರುವುದನ್ನು ಹೇಗೆ ಇದೆಯೋ ಹಾಗೆಯೆ ತಿಳಿಸಬೇಕಲ್ಲವೇ. ಖಾಸಗಿ ಆರ್ಥಿಕ ಸಂಸ್ಥೆಗಳು ಮಾಡುವ ರೀತಿಯಲ್ಲಿ ಅರ್ಜಿತವಾಗಿದ್ದರೂ ವಸೂಲಾಗಿರದ ಬಡ್ಡಿಯನ್ನು ಆದಾಯವಾಗಿ ಕಾಣಿಸಿದರೆ ಸದಸ್ಯರು ತಮ್ಮ ಸಂಸ್ಥೆಯ ಬಗ್ಗೆ ತಾವೇ ತಪ್ಪು ತಿಳಿದು ಮೈ ಮುರೆಯಬಾರದಲ್ಲವೇ? ಅಥವಾ ಮಿತಿ ಮೀರಿದ ಸಾಧನೆಗಳತ್ತ ಅಪಕ್ವ ರೀತಿಯಲ್ಲಿ ಮುನ್ನುಗ್ಗಬಾರದಲ್ಲವೇ? ಆದರೆ ಸಾರ್ವಜನಿಕವಾಗಿ ಚೆನ್ನಾಗಿ ಕಾಣುವುದು ಮಾರುಕಟ್ಟೆಯಲ್ಲಿ ಸಾಕಷ್ಟು ಮುಖ್ಯವಾದ ಅಗತ್ಯಗಳಲ್ಲಿ ಒಂದು. ಅದರಲ್ಲೂ ಸಹ ಬ್ಯಾಂಕ್‌ಗಳಂತಹ ಸಂಸ್ಥೆಗಳಿಗೆ ಇದು ಇನ್ನೂ ಅಗತ್ಯ. ಆದ್ದರಿಂದಲೇ ಕೇಂದ್ರ ಸರ್ಕಾರವು ಬಂಡವಾಳ ಮರುಹೂಡಿಕೆ ಮಾಡುವುದು ಒಂದು ರಾಷ್ಟ್ರೀಯ ಆರ್ಥಿಕ ಅಗತ್ಯವಾಗಿಬಿಟ್ಟಿತು.

ಸಹಕಾರಿ ಬ್ಯಾಂಕ್‌ಗಳು ಸದಸ್ಯರಿಂದ ಮಾತ್ರವಲ್ಲದೆ ಸಾರ್ವಜನಿಕರಿಂದಲೂ ಠೇವಣಿ ಸಂಗ್ರಹಿಸುತ್ತವೆ. ಸಹಕಾರಿ ಬ್ಯಾಂಕ್‌ಗಳು ಸಹಕಾರಿ ಸಂಸ್ಥೆಗಳಾದರೂ ಸಹ ಅವು ಬ್ಯಾಂಕ್‌ಗಳೂ ಆಗಿರುವುದರಿಂದ ಅವೂ ಸಹ ಮಾರುಕಟ್ಟೆಯಲ್ಲಿ ಸುಂದರವಾಗಿ ಕಾಣುವುದು ಅತ್ಯಂತ ಅಗತ್ಯ. ಆದ್ದರಿಂದಲೇ ಸಹಕಾರಿ ಬ್ಯಾಂಕ್‌ಗಳು ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯಿದೆಗೆ ಒಳಪಟ್ಟು ನಿಯಮ 22 ರಿಂದ ಬಿಡುಗಡೆ ಪಡೆದಿವೆ. ಇಷ್ಟೆಲ್ಲಾ ಹಿನ್ನೆಲೆಯಾದ ಮೇಲೆ ನಾವು ಈಗ 1959 ರಲ್ಲಿ ಇದ್ದ ಮೂಲ ಕಾಯಿದೆಗೂ ಮತ್ತು 2011 ರಲ್ಲಿ ಇರುವ ಸೌಹಾರ್ದ ಕಾಯಿದೆಗೂ ಇರುವ ಸಾಮ್ಯ ಹಾಗೂ ವ್ಯತ್ಯಾಸಗಳನ್ನು ಗಮನಿಸೋಣ. 2001 ರಲ್ಲಿಸೌಹಾರ್ದ ಕಾಯಿದೆ ಜಾರಿಗೆ ಬಂದಾಗ ಅದರಲ್ಲಿ ಈ ಕೆಳಕಂಡ ಅಂಶಗಳು ಇರಲಿಲ್ಲ.

* ಆರ್ಥಿಕವಾಗಿ ಸಂಘವು ಯಶಸ್ವಿಯಾಗುತ್ತದೆ ಎಂದು ಅನಿಸದಿದ್ದರೆ ಸಂಘದ ನೋಂದಣಿಯನ್ನೇ ನಿರಾಕರಿಸಲು ನಿಬಂಧಕರಿಗೆ ಅಧಿಕಾರ.

* ನಿಬಂಧಕರಿಂದ ವಿಚಾರಣೆ(ಅರ್ಜಿ ಬಂದಾಗ ಮಾತ್ರ) ಈ ಅವಕಾಶಗಳು 2004 ರಲ್ಲಿ ತಿದ್ದುಪಡಿಯಾಗಿ ಸೌಹಾರ್ದ ಕಾಯಿದೆಗೆ ಸೇರಿದವು. ಇದರಿಂದ ಸೌಹಾರ್ದ ಕಾಯಿದೆಯು ಮೂಲ ಕಾಯಿದೆಯ ಕಡೆಗೆ ಸ್ವಲ್ಪ ಸರಿದ ಹಾಗಾಯಿತು. ಆದರೆ ಈ ಸೌಹಾರ್ದ ಕಾಯಿದೆಯ ಪ್ರಭಾವ ಮೂಲ ಕಾಯಿದೆಯ ಮೇಲೂ ಆಯಿತು. ಖಾಸಗಿ ಆರ್ಥಿಕ ಸಂಸ್ಥೆಗಳ ಗುಣಗಳಾದ ಪಾಲುಗಾರಿಕೆ, ಸಹೋದ್ಯಮ ಮುಂತಾದುವುಗಳಿಗೆ ಮೂಲ ಕಾಯಿದೆಯಲ್ಲಿ ಅವಕಾಶಗಳು ಇರಲಿಲ್ಲ. 2003ರಲ್ಲಿ ಇವು ಮೂಲ ಕಾಯಿದೆಗೆ ಸೇರಿದವು. 1997 ರಲ್ಲಿ ಲಾಭಾಂಶದ ಮೆಲಿನ ಮಿತಿಯನ್ನು 12ರಿಂದ 25ಕ್ಕೆ ಎರಿಸಲಾಯಿತು. ಮತ್ತು ನಾವು ಹಿಂದೆ ಕಾಣಿಸಿದ ಪಟ್ಟಿಯಲ್ಲಿ ನೋಡಿದಂತೆ 1977ರಿಂದ ಸುಮಾರು 3 ದಶಕಗಳ ಕಾಲ ಮೂಲ ಕಾಯಿದೆಯಲ್ಲಿ ಇದ್ದ ನಿರ್ಬಂಧ ಅವಕಾಶಗಳು ಈಗ ಇಲ್ಲ. ಸಿಬ್ಬಂದಿ ನೇಮಕಾತಿ, ಸಂಬಳ ನಿಗದಿ ಇತ್ಯಾದಿಗಳಿಗೆ ಈಗ ಮೂಲ ಕಾಯಿದೆ ಪ್ರಕಾರ ಸಹ ನಿಬಂಧಕರ ಅನುಮತಿ ಬೇಕಿಲ್ಲ. ಈ ಬಗ್ಗೆ ನಿಯಮ 17ಕ್ಕೆ ತಿದ್ದುಪಡಿ ಮಾಡಿದ್ದಾರೆ. ಹೊರಗಿನಿಂದ ಸಾಲ ತರಲು ಇದ್ದ ಮಿತಿಯ ಬಗ್ಗೆಗಿನ ನಿಯಮ 25 ಅನ್ನು ತೆಗೆದು ಹಾಕಲಾಗಿದೆ. ವೈದ್ಯನಾಥನ್ ವರದಿ ಹಿನ್ನೆಲೆಯಲ್ಲಿ ಮೂಲ ಕಾಯಿದೆಗೆ 2009 ರಲ್ಲಿ ಬಂದ ತಿದ್ದುಪಡಿ ಪ್ರಕಾರ ಕೃಷಿ ಪತ್ತಿನ ಸಹಕಾರಿ ಸಂಘಗಳಿಗೆ ಯಾವುದೇ ನಿರ್ಬಂಧೀಯ ಅವಕಾಶಗಳು, ಸರ್ಕಾರದ ಹಣ ಎಷ್ಟೇ ಇದ್ದರೂ, ಅನ್ವಯವಾಗುವುದೇ ಇಲ್ಲ.

(ಮುಕ್ತಾಯ.)

ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್‌ಗೆ

## ನೂತನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ



**ವೈ.ಎಸ್.ಸುಬ್ರಮಣ್ಯ**
ಅಧ್ಯಕ್ಷರು

ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ನಿಯಮಿತ ಕೊಪ್ಪ ಇದರ ಮುಂದಿನ ಎರಡುವರೆ ವರ್ಷದ ಅವಧಿಗೆ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆಯ ಸಭೆಯು ದಿನಾಂಕ 28–9–2011 ರಂದು ಕೆ.ಎಸ್.ಸುಬ್ರಮಣ್ಯರವರ ಅಧ್ಯಕ್ಷತೆಯಲ್ಲಿ ನಡೆದು ಅಧ್ಯಕ್ಷರಾಗಿ ವೈ.ಎಸ್.ಸುಬ್ರಮಣ್ಯರವರು ಉಪಾಧ್ಯಕ್ಷರಾಗಿ ಶ್ರೀ ಎಲ್.ಡಿ.ನವೀನ್‌ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಸಹಕಾರಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



**ಎಲ್.ಡಿ. ನವೀನ್**
ಉಪಾಧ್ಯಕ್ಷರು



ಬಯಲಿನಲ್ಲಿ ಪಯಣದ ಗುರಿ

ಎಂ.ಎನ್.ಅಶ್ವತ್ಥ ನಾರಾಯಣ
ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು ಬೆಂಗಳೂರು

# ಸೌಹಾರ್ದ ಕಾಯಿದೆಯ ಪ್ರಸ್ತುತತೆ...

ಸಹಕಾರಿಗಳಿಗೆ ಸೌಹಾರ್ದ ಸಹಕಾರಿಗಳಿಂದ ಆಗುವ ಅನುಕೂಲಗಳ ಬಗ್ಗೆ ಹೆಚ್ಚಿನ ತಿಳುವಳಿಕೆ ಕಾಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಇದರ ಜೊತೆಗೆ ಸ್ವಾಯತ್ತತೆ ಎಂದರೆ ಸ್ವೇಚ್ಚತೆ ಎಂದು ಅರ್ಥೈಸದಂತೆ ಎಚ್ಚರ ವಹಿಸುವುದು ಅತಿ ಅವಶ್ಯಕ. ಸೌಹಾರ್ದ ಕಾಯಿದೆ ರೂಪಿಸುವಾಗ ಪಾರದರ್ಶಕತೆ ಇರಬೇಕೆಂಬುದು ಒಂದು ಪ್ರಮುಖ ಅಂಶವಾಗಿತ್ತು. ಇದನ್ನು ಕಾರ್ಯರೂಪಕ್ಕೆ ತರುವುದು ಸಂಯುಕ್ತ ಸಹಕಾರಿ ಮತ್ತು ಸಹಕಾರಿಗಳ ಆದ್ಯ ಕರ್ತವ್ಯ.

...ಹಿಂದಿನ ಸಂಚಿಕೆಯಿಂದ

ಇದೇ ರೀತಿ ಸಂಯುಕ್ತ ಸಹಕಾರಿ ಜವಾಬ್ಧಾರಿಯಿಮದ ಕೆಲಸ ನಿರ್ವಹಿಸಲು ಅನುಕೂಲವಾಗುವಂತೆ ಜವಾಬ್ಧಾರಿಯನ್ನು ಇನ್ನೂ ಜವಾಬ್ಧಾರಿಯುತವಾಗಿ ಸಂಯುಕ್ತ ಸಹಕಾರಿಯನ್ನು ನಿರ್ಭಂಧಿಸಬೇಕು. ಸಹಕಾರಿ ಇಲಾಖೆ ಅಧಿಕಾರಿಗಳಲ್ಲಿ ಸೌಹಾರ್ದ ಸಹಕಾರಿ ರಚನೆ/ನಿರ್ವಹಣೆ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡಿಸಲು, ಅಧಿಕಾರಿ ಮಟ್ಟದಲ್ಲಿ ಒಂದು ಮೇಲ್ಮಟ್ಟದ ತಿಳುವಳಿಕೆ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿ ಹಮ್ಮಿಕೊಳ್ಳಬೇಕು. ಸಹಕಾರಿ ಇಲಾಖಾಧಿಕಾರಿಗಳ ಸೌಹಾರ್ದ ಕಾಯಿದೆಯನ್ನು ಇನ್ನೂ ಹೆಚ್ಚು ಆಸಕ್ತಿಯಿಂದ ಅಭ್ಯಾಸ ಮಾಡಿ ಅದನ್ನು ಜಾರಿಗೆ ತರುವಂತೆ ಪ್ರಚೋದನೆ ನೀಡುವ ವ್ಯವಸ್ಥೆಯನ್ನು ಸಂಯುಕ್ತ ಸಹಕಾರಿ ನಿರ್ವಹಿಸಬೇಕು.

ಸಂಯುಕ್ತ ಸಹಕಾರಿಯ ನಿರ್ದೇಶಕರು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಹೆಚ್ಚು ಸಂಖ್ಯೆಯಲ್ಲಿ ಸಹಕಾರಿಗಳ ನೋಂದಣಿ ಕ್ರಮ ಜರುಗಿಸಬೇಕು. – ಅಂದರೆ ಅವರೇ ಪ್ರಾರಂಭಿಸಬೇಕೆಂದಲ್ಲ. ಸಹಕಾರಿಗಳನ್ನು ಸೌಹಾರ್ದ ಸಹಕಾರಿಗಳಿಮದ ಆಗುವ ಅನುಕೂಲಗಳ ಬಗ್ಗೆ ಹೆಚ್ಚಿನ ತಿಳುವಳಿಕೆ ಕಾಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಇದರ ಜೊತೆಗೆ ಸ್ವಾಯತ್ತತೆ ಎಮದರೆ ಸ್ವೇಚ್ಚತೆ ಎಂದು ಅಥೈಸದಂತೆ ಎಚ್ಚರ ವಹಿಸುವುದು ಅತಿ ಅವಶ್ಯಕ. ಸೌಹಾರ್ದ ಕಾಯಿದೆ ರೂಪಿಸುವಾಗ ಪಾರದರ್ಶಕತೆ ಇರಬೇಕೆಂಬುದು ಒಂದು ಪ್ರಮುಖ ಅಂಶವಾಗಿತ್ತು. ಇದನ್ನು ಕಾರ್ಯರೂಪಕ್ಕೆ ತರುವುದು ಸಂಯುಕ್ತ ಸಹಕಾರಿ ಮತ್ತು ಸಹಕಾರಿಗಳ ಆದ್ಯ ಕರ್ತವ್ಯ.

ಉಪಸಂಹಾರ : ಸೌಹಾರ್ದ ಕಾಯಿದೆ ಒಂದು ಸ್ವಾಯತ್ತ ಮತ್ತು ಜವಾಬ್ಧಾರಿಯುತ ಸಂಸ್ಥೆಯಾಗಿದ್ದು, ಇದಕ್ಕೆ ಅಸ್ಪಷ್ಟತೆ ಇರುವ ಅವಕಾಶಗಳನ್ನು ಕಾಯಿದೆಯಲ್ಲಿ ಸೇರಿಸದಂತೆ ಸಂಯುಕ್ತ ಸಹಕಾರಿ ಪ್ರಯತ್ನಿಸಬೇಕು. ಅದರಲ್ಲಿ ಪ್ರಮುಖವಾಗಿ ಸೌಹಾರ್ದ ಕಾಯಿದೆಯಲ್ಲಿ ಎಲ್ಲಾ ಅವಕಾಶಗಳಲ್ಲಿ ಸ್ಪಷ್ಟತೆ ಇದೆ. ಉದಾಹರಣೆಗೆ ಮಹಾಸಭೆಯನ್ನು ಸೆಪ್ಟೆಂಬರ್ ಅಂತ್ಯದೊಳಗೆ ನಡೆಸತಕ್ಕದ್ದೆಂದು ನಿಗಧಿಪಡಿಸಿದೆ.

ಇದನ್ನು ವಿಸ್ತರಿಸುವ ಅವಕಾಶ ಮಾಡಲು ಇರಬಾರದು– ಏಕೆಂದರೆ ಆರ್ಥಿಕ ತಃಖ್ತೆಗಳನ್ನು ಸದಸ್ಯರಿಗೆ ತಿಳಿಸುವುದು ವಾರ್ಷಿಕ ಮಹಾಸಭೆಯ ಹಕ್ಕು– ಸಹಕಾರಿಯ ಜವಾಬ್ಧಾರಿ ತಃಖ್ತೆಗಳನ್ನು ಸೆಪ್ಟೆಂಬರ್ ಅಂತ್ಯದೊಳಗೆ ಸದಸ್ಯರಿಗೆ ತಿಳಿಸುವುದು, ಆಡಳಿತ



ಮಂಡಳಿಯ ಪ್ರಮುಖ ಜವಾಬ್ಧಾರಿ. ಅದೇ ರೀತಿ 1959ರ ಕಾಯಿದೆಯಲ್ಲಿರುವ ಕಲಂ 121ರ ಸಮಾನಾಂತರ ಅವಕಾಶ ಕಲ್ಪಿಸದಂತೆ ಸಂಯುಕ್ತ ಸಹಕಾರಿ ಶ್ರಮಿಸಬೇಕು, ಕಾಯಿದೆಯಲ್ಲಿ ರೂಪಿಸಿದ ನೀತಿಗೆ ಪೂರಕವಾಗಿ ತಿದ್ದುಪಡಿಗೆ ಅವಕಾಶ ಕಲ್ಪಿಸಲು ಪ್ರಯತ್ನ ಅವಶ್ಯಕವೇ ಹೊರತು, ವಿನಾಯ್ತಿ ನೀಡುವ ಅವಕಾಶಗಳು ಇರದಂತೆ ಪ್ರಯತ್ನಿಸಬೇಕು. ಸೌಹಾರ್ದ ಕಾಯಿದೆಯನ್ನು–ಬೆಳೆಸುವ ಜವಾಬ್ಧಾರಿ ಸಂಯುಕ್ತ ಸಹಕಾರಿಗೆ ಇರತಕ್ಕದ್ದು. ಮತ್ತು ಇದಕ್ಕೆ ಪೂರಕ ತಿದ್ದುಪಡಿ ಪ್ರಸ್ತಾವನೆ ಮಾಡಲು ಪ್ರಯತ್ನಿಸಬೇಕು.

ಸೌಹಾರ್ದ ಸಹಕಾರಿಗಲು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಯಬೇಕು ಮತ್ತು 1959ರ ಕಾಯಿದೆಯಿಮದ ಪರಿವರ್ತನೆಗೆ ಬದಲಾಗಿ ಹೊಸದಾಗಿ ಸಹಕಾರಿಗಳ ನೋಂದಣಿಗೆ ಪ್ರಯತ್ನಿಸಬೇಕು. ಪರಿವರ್ತನೆಗೆ ಪ್ರಯತ್ನಿಸಿದರೆ 1959ರ ಕಾಯಿದೆಯ ನಿಯಂತ್ರಣ ಭಾವನೆಗಳ ಜೊತೆಯಲ್ಲಿಯೇ ಬರುತ್ತದೆ. ಅದು ಸೌಹಾರ್ದ ಕಾಯಿದೆಯ ಆಶೋತ್ತರಗಳಿಗೆ ತೊಡಕುಂಟಾಗುತ್ತದೆ.

(ಮುಕ್ತಾಯ)

■

## ಕವಲೇದುರ್ಗ ಸೌಹಾರ್ದ ಸಹಕಾರಿಗೆ ಕ್ಯಾಂಪ್ಕೋ ಅಧ್ಯಕ್ಷ ಹಾಗೂ ಸಂಯುಕ್ತ ಸಹಕಾರಿಯ ಅಧ್ಯಕ್ಷರ ಭೇಟಿ



ಶಿವಮೊಗ್ಗ ಜಿಲ್ಲೆಯ ಕವಲೇದುರ್ಗ ಸೌಹಾರ್ದ ಸಹಕಾರಿಗೆ ಕ್ಯಾಂಪ್ಕೋ ಅಧ್ಯಕ್ಷ ಶ್ರೀ ಕೊಂಕೋಡಿ ಪದ್ಮನಾಭ ಹಾಗೂ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್. ಆರ್.ಸತೀಶಚಂದ್ರರವರು ದಿನಾಂಕ 7/9/2011 ರ ಭೇಟಿ ನೀಡಿ ಕಾರ್ಯಚಟುವಟಿಕೆಗಳನ್ನು ಪರಿಶಿಲಿಸಿದರು.ಸಹಕಾರಿಯ ಅಭಿವೃದ್ಧಿಗೆ ಹಲವು ಸೂಚನೆಗಳನ್ನು ನೀಡಿದರು. ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಶಿವಮೊಗ್ಗ ಜಿಲ್ಲಾ ಪ್ರತಿನಿಧಿ ಶ್ರೀ ರವಿಕುಮಾರರವರೂ ಉಪಸ್ಥಿತರಿದ್ದರು.

# ಕವಲೇದುರ್ಗ ಬಹು ಉದ್ದೇಶಿ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಶಾಖೆಗಳನ್ನು ತೆರೆಯಲು ತೀರ್ಮಾನ

ಶಿವಮೊಗ್ಗ ಜಿಲ್ಲೆಯ ಉತ್ತಮ ಸೌಹಾರ್ದ ಸಹಕಾರಿಗಳಲ್ಲೊಂದಾದ ಕವಲೇದುರ್ಗ ಬಹುಉದ್ದೇಶಿ ಸೌಹಾರ್ದ ಸಹಕಾರಿಯ 2010–11 ನೇ ಸಾಲಿನ ಸಾಮಾನ್ಯ ಸಭೆಯು ದಿನಾಂಕ 29/9/2011 ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಮ್. ಎಮ್.ಲಕ್ಷ್ಮೀನಾರಾಯಣರವರ ಅಧ್ಯಕ್ಷತೆ ನಡೆಯಿತು. ಸಹಕಾರಿಯ ಗೌರವಾಧ್ಯಕ್ಷ ಹಾಗೂ ರಾಜಗುರು ಡಾ.ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಸಾನಿಧ್ಯ ನಡೆದ ಈ ಸಭೆಯಲ್ಲಿ ಸಹಕಾರಿಯು ನಡೆಸುತ್ತಿರುವ ವಿವಿಧ ಕಾರ್ಯಕ್ರಮಗಳ ಬಗ್ಗೆ ಸದಸ್ಯರಿಗೆ ತಿಳುವಳಿಕೆ ನೀಡಲಾಯಿತು. ಮತ್ತು ಮುಂಬರುವ ದಿನಗಳಲ್ಲಿ ಸಹಕಾರಿಯ ವ್ಯಾಪ್ತಿಯಲ್ಲಿರುವ ಸದಸ್ಯರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಸಹಕಾರಿಯ ಶಾಖೆಗಳನ್ನು ತೆರೆಯಲಾಗುವುದು ಎಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಮ್. ಎಮ್.ಲಕ್ಷ್ಮೀನಾರಾಯಣರವರು ಸಭೆಗೆ ಶ್ರೀ ತಿಳಿಸಿದರು.

## ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿಯ 7ನೇ ವಾರ್ಷಿಕ ಸಭೆ 34.60 ಲಕ್ಷ ರೂಗಳ ಲಾಭ

ತುಮಕೂರು ನಗರದ ಶ್ರೀ ಶಿವಾಜಿ ಪತ್ತಿನ ಸೌಹಾರ್ದ ಸಹಕಾರಿಯ 7ನೇ ಸಾಮಾನ್ಯ ಸಭೆಯು ಕೆ.ಪಿ.ಟಿ.ಸಿ.ಎಲ್ ಇಂಜಿನೀಯರ್ಸ ಅಸೋಸಿಯೇಶನ್ ಸಭಾಂಗಣದಲ್ಲಿ ಸಹಕಾರಿಯ ಅಧ್ಯಕ್ಷ ಶ್ರೀ ಟಿ.ಎಲ್.ಸುರೇಶರಾವ್ ಅಧ್ಯಕ್ಷತೆಯಲ್ಲಿ ನಡೆಯಿತು.

ವರದಿ ವರ್ಷದಲ್ಲಿ ಸಹಕಾರಿಯಲ್ಲಿ 995 ಸದಸ್ಯರಿದ್ದು, 857.95 ಲಕ್ಷ ರೂ. ಗಳ ಠೇವಣಿ ಇದೆ. ಸಾಲ ವಸೂಲಾತಿ ಶೇಕಡಾ 92% ಇದೆ. ಸಹಕಾರಿಯು ಸ್ವಂತ ನಿವೇಶನವನ್ನು ಹೊಂದಿದ್ದು ಸಧ್ಯದಲ್ಲಿಯೆ ಸುಮಾರು 1 ಕೋಟಿ ಅಂದಾಜಿನಲ್ಲಿ ನೂತನ ಕಟ್ಟಡವನ್ನು ನಿರ್ಮಿಸಲಾಗುವುದು ಎಂದು ಶ್ರೀ ಸುರೇಶರಾವ ತಿಳಿಸಿದರು.

## ಚಿಕ್ಕೇರೂರ ಪತ್ತಿನ ಸೌಹಾರ್ದ ಸಹಕಾರಿಗೆ 4.12 ಲಕ್ಷ ಲಾಭ

ಚಿಕ್ಕೇರೂರ ಪತ್ತಿನ ಸೌಹಾರ್ದ ಸಹಕಾರಿಯ 2010–11 ನೇ ಸಾಲಿನ ವಾರ್ಷಿಕ ಸಭೆಯು ದಿನಾಂಕ 25–9–2011 ರಂದು ಸಹಕಾರಿಯ ಅಧ್ಯಕ್ಷ ಶ್ರೀ ಜೆ.ಆರ್.ಗುತ್ತಲ ರವರ ಅಧ್ಯಕ್ಷತೆಯಲ್ಲಿ ನಡೆದು ಸದಸ್ಯರಿಗೆ ಶೇಕಡಾ 5% ಡಿವಿಡೆಂಡ ಘೊಷಣೆಮಾಡಲಾಗಿದೆ. ಪ್ರಸಕ್ತ ಸಾಲಿನ ಅಂತ್ಯಕ್ಕೆ 47.47 ಲಕ್ಷ ಶೇರು ಬಂಡವಾಳ,117.49 ಲಕ್ಷ ನಿಧಿಗಳು 546.95 ಲಕ್ಷ ಠೇವಣಿ, 716.00 ಲಕ್ಷ ದುಡಿಯುವ ಬಂಡವಾಳ ಹೊಂದಿದ್ದು 4.12 ಲಕ್ಷ ರೂಗಳ ಲಾಭ ಗಳಿಸಿದೆ ಎಂದು ತಿಳಿಸಿದರು. ಸಹಕಾರಿಯ ಸದಸ್ಯರಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

## ಧುಪದಾಳ ಅರಿಹಂತ ಅಲ್ಪಸಂಖ್ಯಾತರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿಯ ಸದಸ್ಯರ ಅಧ್ಯಯನ ಪ್ರವಾಸ



ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಧುಪದಾಳ ಅರಿಹಂತ ಅಲ್ಪಸಂಖ್ಯಾತರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿಯ ಸದಸ್ಯರು ಹಾಗೂ ಅರಿಹಂತ ಸೌಹಾರ್ದ ಮಿಲ್ಕ ಡೇರಿ ಸದಸ್ಯರು ದಿನಾಂಕ 11/9/2011ರಂದು ಧಾರವಾಡದ ಕೃಷಿಮೇಳದಲ್ಲಿ ಭಾಗವಹಿಸಿ ಅಧ್ಯಯನ ಮಾಡಲು ಪ್ರವಾಸ ಕೈಗೊಂಡಿದ್ದರು.



ಭದ್ರಾವತಿ ತಾಲ್ಲೂಕಿನ ಶ್ರೀ ಹರಳಯ್ಯ ಸೌಹಾರ್ದ ವಿವಿದ್ಯೋಗ ಸಹಕಾರ ಸಂಘ ನಿ. ಶಿವಮೊಗ್ಗದಲ್ಲಿ ಸದಸ್ಯರ ಸಭೆಯಲ್ಲಿ ಸಂಘದ ಸದಸ್ಯರನ್ನು ಕಾಣಬಹುದು.

# ಅಕ್ಟೋಬರ್ 2011ರ ತರಬೇತಿ ಕಾರ್ಯಕ್ರಮಗಳು



**ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಕಾರ್ಯಾಗಾರ :** ದಿನಾಂಕ 17–10–2011ನೇ ಸೋಮವಾರ ಬೆಳಗ್ಗೆ 9–30 ಸ್ಥಳ. ಕೆ.ಹೆಚ್.ಪಾಟೀಲ್ ಸಭಾಂಗಣ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಕೆ.ಹೆಚ್ ರೋಡ ಬೆಂಗಳೂರು 560027. ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಪ್ಪದೆ ಭಾಗವಹಿಸಲು ಸೂಚಿಸಿದೆ.

### ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ, ಸಹಕಾರಿಗಳಲ್ಲಿನ ಹಿರಿಯ ಅಧಿಕಾರಿಗಳಿಗೆ ಮತ್ತು ಮಾರಾಟಾಧಿಕಾರಿ ಗಳಿಗಾಗಿ "ಸಾಲ ಪತ್ರ ದಾಖಲಾತಿ ಹಾಗೂ ಸಾಲ ವಸೂಲಾತಿ ಕ್ರಮಗಳು ಕಾರ್ಯಾಗಾರ"

| | |
|---|---|
| **ದಿನಾಂಕ: 22.10,2011 ಶನಿವಾರ,** | **ದಿನಾಂಕ: 29. 10.2011 ಶನಿವಾರ** |
| **ಸಮಯ ಬೆಳಗ್ಗೆ: 09.30 ಗಂಟೆಗೆ** | **ಸಮಯ: ಬೆಳಗ್ಗೆ 09.30 ಗಂಟೆಗೆ** |
| **ಸ್ಥಳ: ವೈದ್ಯಕೀಯ ಭವನ, ಲಯನ್ಸ ಕ್ಲಬ್ ಸರ್ಕಲ್** | **ಸ್ಥಳ : ಕನ್ನಡ ಸಾಹಿತ್ಯ ಭವನ. ರಾಣಿ ಚನ್ನಮ್ಮ** |
| **ಬಸ್‌ಸ್ಟಾಂಡ ಎದುರು. ಗಂಗಾವತಿ.** | **ಕೊಪ್ಪಳ ಜಿಲ್ಲೆ, ಬೆಳಗಾವಿ** |

ಗಂಗಾವತಿಯಲ್ಲಿ ದಿನಾಂಕ 22–10–2011 ರಂದು ನಡೆಸಲು ಉದ್ದೇಶಿಸಿರುವ ಕಾರ್ಯಕ್ರಮವನ್ನು ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಬೆಳಗಾವಿಯಲ್ಲಿ ದಿನಾಂಕ 29–10–2011 ರಂದು ನಡೆಸಲು ಉದ್ದೇಶಿಸಿರುವ ಕಾರ್ಯಕ್ರಮದಲ್ಲಿ ಬೆಳಗಾವಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಏರ್ಪಡಿಸಲಾಗಿದೆ. ಬೇರೆ ಜಿಲ್ಲೆಯವರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಅಪೇಕ್ಷೆಯಿದ್ದಲ್ಲಿ ಸಂಯುಕ್ತ ಸಹಕಾರಿಗೆ ಪೂರ್ವಭಾವಿಯಾಗಿ ತಿಳುಹಿಸತಕ್ಕದ್ದು. ಒಂದು ಸಹಕಾರಿಯಿಂದ 2 ಪ್ರತಿನಿಧಿಗಳು ಭಾಗವಹಿಸಬಹುದಾಗಿದೆ. ಭಾಗವಹಿಸುವ ಸಹಕಾರಿಯಿಂದ ಪ್ರತಿನಿಧಿಗಳಿಗೆ ತಲಾ ರೂ 100/– ಪ್ರತಿನಿಧಿ ಶುಲ್ಕವನ್ನು "ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು" ಯಿವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಪಾವತಿಯಾಗುವಂತೆ ಡಿ.ಡಿ.ಯನ್ನು ಕಳುಹಿಸಬೇಕು. ಭಾಗವಹಿಸುವ ಪ್ರತಿನಿಧಿಗಳು ದಿನಾಂಕ 18.10.2011ರ ಒಳಗೆ ಸಂಯುಕ್ತ ಸಹಕಾರಿಗೆ ತಲುಪುವಂತೆ ಮಾಹಿತಿಯನ್ನು ಕಳುಹಿಸಲು ಸೂಚಿಸಿದೆ.

# ಹಂಪಿಯಲ್ಲಿ ಡಿಸೆಂಬರ್ 2011ರಂದು ಸೌಹಾರ್ದ ಸಹಕಾರಿ ಸಿಬ್ಬಂದಿಗಳ 6ನೇ ತಂಡದ ತರಬೇತಿ ಕಾರ್ಯಕ್ರಮ



ಸುಪ್ರಸಿದ್ಧ ಐತಿಹಾಸಿಕ ಹಾಗೂ ಪ್ರವಾಸಿ ತಾಣ "ಹಂಪಿ"ಯಲ್ಲಿ ಡಿಸೆಂಬರ್ 2011 ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 6 ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವನ್ನು ಇದೇ ಡಿಸೆಂಬರ್ 2011 ರಲ್ಲಿ ಸುಪ್ರಸಿದ್ಧ ಐತಿಹಾಸಿಕ ಹಾಗೂ ಪ್ರವಾಸಿ ತಾಣ ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾನಿಲಯದ ಸುಸಜ್ಜಿತ, ಆಧುನಿಕ ಸೌಲಭ್ಯಗಳಿರುವ ಹಾಗೂ ಉತ್ತಮ ಪರಿಸರದಲ್ಲಿ ಏರ್ಪಡಿಸಲಾಗುತ್ತಿದೆ.

"ಸಂಪೂರ್ಣ ವ್ಯಕ್ತಿತ್ವ ವಿಕಸನ"ದ 10 ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಂದೇ ನಿಮ್ಮ ಸೀಟನ್ನು ಕಾಯ್ದಿರಿಸಿ. ಲಭ್ಯವಿರುವ ಸೀಟುಗಳು. 40 ಮಾತ್ರ. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ. ಪ್ರವೇಶ ಫೀ ತಲಾ ರೂ 5000/–ಗಳು. ಹೆಚ್ಚಿನ ವಿವರಗಳಿಗೆ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಿ.

## ಸೌಹಾರ್ದ ಸಹಕಾರಿಗಳ ಅರ್ಧವಾರ್ಷಿಕ ಮಾಹಿತಿ

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿಯ ಅರ್ಧವಾರ್ಷಿಕ ಮಾಹಿತಿಯನ್ನು ಸಂಯುಕ್ತ ಸಹಕಾರಿಯು ಕಳುಹಿಸಿರುವ ಮಾಹಿತಿ ಪತ್ರ ನಮೂನೆಯಲ್ಲಿ ವಿವರಗಳನ್ನು ಭರ್ತಿಮಾಡಿ 31–102011 ರೊಳಗಾಗಿ ಕಳುಹಿಸಲು ಕ್ರಮವಿಡುವಂತೆ ಸೂಚಿಸಲಾಗಿದೆ. ಸೌಹಾರ್ದ ಸಹಕಾರಿಗಳು ಅಕ್ಟೋಬರ 31 ರ ಒಳಗೆ ನಿಬಂಧಕರಿಗೆ ಮಾಹಿತಿ ಸಲ್ಲಿಸುವ ಕುರಿತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 34ರಂತೆ ಕೆಲವು ಮಾಹಿತಿಗಳನ್ನು ತಮ್ಮ ಕಾರ್ಯವ್ಯಾಪ್ತಿಗೆ ಸಂಬಂಧಿಸಿದ ನಿಬಂಧಕರ ಕಛೇರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಹಾಗೆ ಕಳುಹಿಸದ ಸಹಕಾರಿಗಳು ಕೂಡಲೇ ಕಳುಹಿಸತಕ್ಕದ್ದು.

# ಬಡ್ಡಿಯಿಲ್ಲದ ಬಂಡವಾಳ, ಉತ್ತಮ ಗ್ರಾಹಕರ ಲಭ್ಯತೆ ಮತ್ತು ಲಾಭಾಂಶ



ಬಿ.ಎಸ್. ಗುಂಡೂರಾವ್,
ಅಧ್ಯಕ್ಷರು

## "ಚೀಟಿ ವ್ಯವಹಾರ" ದಿಂದ ಉದಯ ಸೌಹಾರ್ದ ಸಹಕಾರಿಯ ಸಾಧನೆ

ಸ್ವಾಯತ್ತತೆ, ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣ ಧ್ಯೇಯದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು ಉತ್ತಮವಾಗಿ ಬೇರೆ ಸಹಕಾರಿ ಸಂಸ್ಥೆಗಳಿಗಿಂತಲೂ ವಿಭಿನ್ನವಾಗಿ ಕಾರ್ಯನಿರ್ವಹಿಸಿ ಸರಕಾರದ ಸಾರ್ವಜನಿಕರ ಹಾಗೂ ಸಹಕಾರಿಗಳ ಮನ್ನಣೆಗೆ ಪಾತ್ರರಾಗುತ್ತಿರುವುದು ಅತ್ಯಂತ ಸ್ವಾಗತಾರ್ಹ. ಸೌಹಾರ್ದ ಸಹಕಾರಿಗಳಿಗೆ ಯಾವುದೆ ಬಾಹ್ಯ ನೆರವೂ ಇಲ್ಲ ಬಾಹ್ಯ ಹಸ್ತಕ್ಷೇಪವೂ ಇಲ್ಲ. ಹೀಗಾಗಿ ಈ ಸೌಹಾರ್ದ ಸಹಕಾರಿಗಳ ಜವಾಬ್ದಾರಿ ಅತ್ಯಂತ ಹೆಚ್ಚಿನದು. ಅದರಲ್ಲೂ ಬಂಡವಾಳ ಶೇಖರಣೆ ಹಾಗೂ ಅದರ ವಿನಿಯೋಗ ಅಂದರೆ ಹಣಕಾಸಿನ ನಿರ್ವಹಣೆ ಒಂದು ಅತ್ಯಂತ ಮಹತ್ವದ ವಿಷಯ. ಬಡ್ಡಿಯೇತರ ಆದಾಯಗಳಿಗೆ ಹೆಚ್ಚು ಒತ್ತು ನೀಡುತ್ತಿರುವ ಸೌಹಾರ್ದ ಸಹಕಾರಿಗಳ ಹಣಕಾಸಿನ ನಿರ್ವಹಣೆಯಲ್ಲಿ ಚೀಟಿ ವ್ಯವಹಾರವೂ ಅತ್ಯಂತ ಮಹತ್ವದ ಪಾತ್ರ ನಿರ್ವಹಿಸುತ್ತದೆ ಎಂತಲೂ ಮತ್ತು ಇದನ್ನು ಉದಯ ಸೌಹಾರ್ದ ಸಹಕಾರಿಯಲ್ಲಿ ಅತ್ಯಂತ ಜಾಗರೂಕತೆಯಿಂದ ಬಡ್ಡಿಯಿಲ್ಲದ , ಉತ್ತಮ ಗ್ರಾಹಕನನ್ನು ಒದಗಿಸುವ ಹಾಗೂ ಉತ್ತಮ ಲಾಭಂಶವನ್ನು ತಂದುಕೊಡುವ ಅತ್ಯಂತ ಪರಿಣಾಮಕಾರಿಯಾಗಿರುವ ವ್ಯವಹಾರ ವೆಂದು ನನ್ನ ಅಭಿಪ್ರಾಯವಾಗಿದೆ. ಬಡ್ಡಿಯೇತರ ಆದಾಯ ಸಂಗ್ರಹ ಮೂಲಗಳಲ್ಲಿ ಒಂದಾಗಿರುವ ಈ ಚೀಟಿ ವ್ಯವಹಾರವನ್ನು ಕೆಲವು ಸಹಕಾರಿಗಳು ನಿರ್ವಹಿಸುತ್ತಿವೆಯಾದರೂ ಉದಯ ಸೌಹಾರ್ದ ಸಹಕಾರಿಯ ಕಾರ್ಯಚಟುವಟಿಕೆಗಳು ವಿಶೇಷವಾಗಿ ಚೀಟಿ ವ್ಯವಹಾರ ರಾಜ್ಯದ ಬೇರೆ ಸೌಹಾರ್ದ ಸಹಕಾರಿಗಳಿಗೂ ಸಹಕಾರಿಯಾಗಬಹುದೆಂದು ಆಶಿಸುತ್ತೇನೆ.



1996ರರಲ್ಲಿ 1959ರ ಕಾಯ್ದೆಯಡಿಯಲ್ಲಿ ನೊಂದಣಿಯಾಗಿ ಈ ಸಹಕಾರಿ ಸಂಘವು 2001ರಲ್ಲಿ ಸೌಹಾರ್ದ ಸಹಕಾರಿಯಾಗಿ ಪರಿವರ್ತನೆಯಾಗಿದೆ. 1990 ಸದಸ್ಯ ಬಳಗವನ್ನು ಹೊಂದಿರುವ ಉದಯ ಸೌಹಾರ್ದ ಸಹಕಾರಿಯು 1.88 ಕೋಟಿ ರೂಗಳ ಪಾಲುಬಂಡವಾಳ 16.77 ಕೋಟಿ ರೂಗಳ ಠೇವಣಿ 20.08 ಕೋಟಿ ರೂಗಳ ಸಾಲ ನೀಡಿಕೆ 23 ಕೋಟಿ ರೂಗಳ ದುಡಿಯುವ ಬಂಡವಾಳ ಇದ್ದು ಬೇರೆಲ್ಲ ಸಹಕಾರಿಗಳ ಹಾಗೆ ಉಪವಿಧಿಗಳನ್ವಯ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಇ–ಸ್ಟಾಂಪಿಂಗ್ ವ್ಯವಹಾರ, ಭದ್ರತಾ ಕಪಾಟು ಸೌಲಭ್ಯ, ಮುಚ್ಚುವೆಲ ಫಂಡಗಳ ವ್ಯವಹಾರ, ಇನ್ಸುರನ್ಸ್ ವ್ಯವಹಾರಗಳನ್ನು ಮಾಡುತ್ತ ಸದಸ್ಯರಿಗೆ ಉತ್ತಮ ಸೇವೆ ಸಲ್ಲಿಸುತ್ತಿದೆ. 28 ಜನ ಸಿಬ್ಬಂದಿಯನ್ನು ಹೊಂದಿರುವ ಈ ಸಹಕಾರಿ ಪ್ರಸಕ್ತ ಸಾಲಿನಲ್ಲಿ 1.45 ಕೋಟಿ ರೂಗಳ ಲಾಭ ಗಳಿಸಿರುವುದು ವಿಶೇಷ.

ಈ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆಯೇ ಒಂದು ವಿಶೇಷ. ಬೆಳಗ್ಗೆಯಿಂದ ಸಂಜೆವರೆವಿಗೂ ನಡೆಯುವ ಈ ಸಾಮಾನ್ಯ ಸಭೆಯಲ್ಲಿ ಸದಸ್ಯರೆಲ್ಲರೂ ಕುಟುಂಬ ಸಮೇತರಾಗಿ ಭಾಗವಹಿಸಲು ಅವಕಾಶ. ಹಿರಿಯ ಸದಸ್ಯರಿಗೆ ಸನ್ಮಾನ , ಪ್ರತಿಭಾ ಪುರಸ್ಕಾರ ಆರ್ಥಿಕವಾಗಿ ಹಿಂದುಳಿದವರಿಗೆ ಸಹಾಯ ಸದಸ್ಯ ಕುಟುಂಬದವರಿಗಾಗಿ ಆರೋಗ್ಯ ನಿಧಿ, ಸದಸ್ಯರ ಮಕ್ಕಳಿಗಾಗಿ ವಿದ್ಯಾನಿಧಿ ಆರೋಗ್ಯ ತಪಾಸಣೆಗಾಗಿ ತುರ್ತು ಚಿಕಿತ್ಸೆಗಾಗಿ ಅಂಬುಲೆನ್ಸ ಶವ ಸಂಸ್ಕಾರಕ್ಕೆ ವಾಹನ, ಮರಣೋತ್ತರ ನಿಧಿ ಇತ್ಯಾದಿ ಪ್ರೋತ್ಸಾಹಕರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಪ್ರತಿ ವರ್ಷ ರಾಮನವಮಿ ಕಾರ್ಯಕ್ರಮವನ್ನು ವೈಶಿಷ್ಟಪೂರ್ಣವಾಗಿ ಆಚರಿಸಲಾಗುತ್ತದೆ ಎಂದು ತಿಳಿಸಿದರಲ್ಲದೆ 2009 ರಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಸಂಭವಿಸಿದ ನೆರೆ ಸಂತ್ರಸ್ತ ಕುಟುಂಬದವರಿಗಾಗಿ 10.00 ಲಕ್ಷ ರೂಗಳ ನೆರವನ್ನು ವಿವಿಧ ವಸ್ತುಗಳ ರೂಪದಲ್ಲಿ ನೀಡಲಾಗಿದೆ.

### "ಚೀಟಿ ವ್ಯವಹಾರ"

ಕರ್ನಾಟಕ ಚಿಟ್‌ಫಂಡ ಕಾಯ್ದೆಯಡಿಯಲ್ಲಿ ಚೀಟಿ ವ್ಯವಹಾರವನ್ನು ಉದಯ ಸೌಹಾರ್ದ ಸಹಕಾರಿಯಲ್ಲಿ ಕಳೆದ 9 ವರ್ಷಗಳಿಂದ ನಡೆಸಲಾಗುತ್ತಿದೆ. ವಾರ್ಷಿಕ ರೂ 8 ಕೋಟಿಯಷ್ಟು ಚೀಟಿ ವ್ಯವಹಾರನಡೆಯುತ್ತಿದೆ. 1200 ಸದಸ್ಯರಿದ್ದಾರೆ. 22 ರಿಂದ 25 ಗ್ರೂಪಗಳಿವೆ. ರೂ.1.ಲಕ್ಷ,2 ಲಕ್ಷ, 3 ಲಕ್ಷ, 5 ಲಕ್ಷ ಮೊತ್ತದ ಚೀಟಿಗಳಿವೆ. 40 ತಿಂಗಳ ಅವಧಿ. ಕೂಗುವವರು ಒಟ್ಟು ಚೀಟಿ ಮೊತ್ತದ 30% ಒಳಗಿನ ಮೊತ್ತಕ್ಕೆ ಕೂಗಬೇಕು. ಇದಕ್ಕಿಂತ ಹೆಚ್ಚಿನ ಮೂತ್ತಕ್ಕೆ ಕೂಗುವವರು ಹೆಚ್ಚಿದ್ದರೆ ಲಾಟರಿಯ ಮುಖಾಂತರ ಚೀಟಿ ತೆಗೆಯಲಾಗುತ್ತದೆ. ಚೀಟಿ ತುಂಬಲು ವಿಳಂಬ ಅಥವಾ ತುಂಬದಿರುವವರ ಸಂಖ್ಯೆ ತೀರ ವಿರಳ. ಅಂಥವರಿಗೆ 2% ದಂಡದ ಬಡ್ಡಿಯನ್ನು ಹಾಕಲಾಗುತ್ತದೆ. ಚೀಟಿ ಹಣ ವಸೂಲಾತಿಯಲ್ಲಿ ಯಾವುದೆ ಸಮಸ್ಯೆ ಇರುವುದಿಲ್ಲ. ಚೀಟಿಯನ್ನು ಕೂಗಿ ಪಡೆದವರು 2 ಸದಸ್ಯರಿಂದ ಜಾಮೀನು ಪಡೆಯಲಾಗುತ್ತದೆ. ಮತ್ತು ಕೂಗಿದವರಿಂದ ಸಂಬಳ ಖಾತ್ರಿ, ಇನ್ಸುರೆನ್ಸ, ಎಫ್.ಡಿ.ಸರ್ಟಿಫಿಕೇಟ, ಆಸ್ತಿ ದಾಖಲೆಗಳು ಎಲ್.ಐ.ಸಿ ಬಾಂಡ್, ಇತ್ಯಾದಿಗಳನ್ನು ಆಧಾರವನ್ನಾಗಿ ಪಡೆಯಲಾಗುತ್ತದೆ. ಚೀಟಿ ಕೂಗಿ ಉಳಿದ ಮೊತ್ತವನ್ನು ಸ್ಥಳದಲ್ಲಿಯೆ ಉಳಿದ ಸದಸ್ಯರಿಗೆ ವಿತರಣೆ ಮಾಡಲಾಗುತ್ತದೆ. ನಿಗದಿತ ಸಮಯದಲ್ಲಿ ಚೀಟಿ ಹಣವನ್ನು ಪಾವತಿಸದಿರುವವರಿಗೆ ಚೀಟಿ ಲಾಭಾಂಶ ವಿತರಣೆ ಮಾಡಲಾಗುವುದಿಲ್ಲ. ಸಾಲ ವಸೂಲಾತಿಗೂ ಸಹಕಾರಿ. ಠೇವಣಿ ಸಂಗ್ರಹಕ್ಕೂ ಸಹಕಾರಿ. ಸಹಕಾರಿಯ ಆರ್ಥಿಕ ಸಧೃಡತೆಗೂ ಸಹಕಾರಿ.

ಈ ಚೀಟಿ ವ್ಯವಹಾರ ಉಸ್ತುವಾರಿ ನೋಡಿಕೊಳ್ಳಲು ಒಂದು ಸಮಿತಿಯನ್ನು ರಚಿಸಲಾಗಿದೆ. 3 ಜನ ಸಿಬ್ಬಂದಿಯವರು ಈ ವ್ಯವಹಾರ ನೋಡಿಕೊಳ್ಳುತ್ತಾರೆ. ಒಟ್ಟಾರೆ ಈ ಚೀಟಿ ವ್ಯವಹಾರ ನಿರ್ವಹಿಸಲು ರೂ 10.00 ಲಕ್ಷರೂಗಳ ವೆಚ್ಚವಾಗುತ್ತಿದೆ. ಆದರೆ 35 ರಿಂದ 40 ಲಕ್ಷ ರೂಗಳ ಲಾಭ ಬರುತ್ತದೆ. ನಗದು ದ್ರವ್ಯ (ಲಿಕ್ವಿಡ್ ಕ್ಯಾಶ್) ಯಾವಾಗಲೂ ದೊರೆಯುವ ಅವಕಾಶ. ಸಹಕಾರಿಗೆ ದುಡಿಯುವ ಬಂಡವಾಳವಾಗುತ್ತದೆ. ಯಾವುದೆ ಹಣ ಹೂಡಿಕೆಯಿಲ್ಲದೆ, ಬಂಡವಾಳಕ್ಕೆ ಬಡ್ಡಿಕೊಡದೆ ಲಾಭ ಬರುತ್ತದೆಯಾದ್ದರಿಂದ ಸೌಹಾರ್ದ ಸಹಕಾರಿಗಳು ಈ ವ್ಯವಹಾರ ಮಾಡುವುದು ಅವಶ್ಯಕವೆಂದು ಎಂದು ಅಭಿಪ್ರಾಯಪಡುತ್ತಾರೆ. ■




**ಶ್ರೀಕಾಂತ ಬರುವೆ**
ಕಾನೂನು ವಿಭಾಗ ಸಂಯುಕ್ತ ಸಹಕಾರಿ

- **ಚಿಕ್ಕೇರೂರು ಪತ್ತಿನ ಸೌಹಾರ್ದ ಸಹಕಾರಿ**

**ಪ್ರಶ್ನೆ : ನಮ್ಮ ಸಹಕಾರಿಯಲ್ಲಿ ನೌಕರರಿಗೆ ಪ್ರತಿವರ್ಷ ಬೋನಸ್ ನೀಡಲಾಗುತ್ತಿದೆ. ಆದರೆ ಪ್ರಸಕ್ತ ಸಾಲಿನಲ್ಲಿ ಸಹಕಾರಿಗೆ ಕಡಿಮೆ ಲಾಭ ಬಂದಿರುವುದರಿಂದ ಸಹಕಾರಿಯಲ್ಲಿನ ಒಳಿತು ನಿಧಿಯನ್ನು (Employee wellfare fund) ಉಪಯೋಗಿಸಿ ಸಹಕಾರಿಯ ನೌಕರರಿಗೆ ನೀಡಬಹುದೆ ?**

**ಉತ್ತರ :** ನಿಮ್ಮ ಸಹಕಾರಿಯ ಉಪವಿಧಿಯಲ್ಲಿ ನೌಕರರ ಒಳಿತು ನಿಧಿಯನ್ನು ಬೋನಸ್ ನೀಡಲು ಬಳಸಿಕೊಳ್ಳಲು ಅವಕಾಶವಿದ್ದರೆ ನೌಕರರಿಗೆ ಬೋನಸ್ ನೀಡಬಹುದಾಗಿದೆ. ನೌಕರರ ಒಳಿತು ನಿಧಿಯನ್ನು ಬಳಸಿಕೊಳ್ಳುವುದಕ್ಕೂ ಪೂರ್ವದಲ್ಲಿ ಸದರಿ ನಿಧಿಯನ್ನು ಯಾವ ಉದ್ದೇಶಕ್ಕಾಗಿ ಸೃಜಿಸಲಾಗಿದೆ ಎಂಬುದನ್ನು ಖಾತ್ರಿಪಡಿಸಿಕೊಂಡು ಅದೇ ಉದ್ದೇಶಕ್ಕೆ ಬಳಕೆಯಾಗುವಂತೆ ನೋಡಿಕೊಳ್ಳಬೇಕು. ಅದನ್ನು ಬೇರೆ ಕಾರಣಗಳಿಗೆ ಉಪಯೋಗಿಸಲು ಬರುವುದಿಲ್ಲ.

- **ವಿಜಯ ಸೌಹಾರ್ದ ಪತ್ತಿನ ಸಹಕಾರಿ ನಿ ಜಮಖಂಡಿ**

**ಪ್ರಶ್ನೆ : ವಾಣಿಜ್ಯ ತೆರಿಗೆ ಇಲಾಖೆಯವರು ವಾಣಿಜ್ಯ ತೆರಿಗೆ ಕಾಯ್ದೆ ಕಲಂ 59(2ರನ್ವಯ ನೊಂದಣೆ ಮಾಡುವಂತೆ ಮತ್ತು ತಿಳಿಸಿರುತ್ತಾರೆ. ಆ ರಿತಿಯಲ್ಲಿ ನೊಂದಣೆ ಹೊಂದಿದರೆ ಸಕ್ಷಮ ಪ್ರಾಧಿಕಾರದಿಂದ ನೊಂದಣೆ ಪ್ರಮಾಣ ಪತ್ರ ಪಡೆದಿರುವ ಎಲ್ಲ ವ್ಯಕ್ತಿಗಳು ವೃತ್ತಿ ತೆರಿಗೆ ಪಾವತಿಸಬೇಕಾಗುತ್ತದೆ. ಇದಕ್ಕೆ ಸಲಹೆ ನೀಡಲು ಕೋರಿದೆ?**

**ಉತ್ತರ :** ತಾವು ಸೌಹಾರ್ದ ಸಹಕಾರಿ ಅಧಿನಿಯಮ 1997 ರಡಿಯಲ್ಲಿ ನೊಂದಣೆಯಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಸೌಹಾರ್ದ ಸಹಕಾರಿಗಳಿಗೆ ವೃತ್ತಿ ತೆರಿಗೆ ಅನ್ವಯವಾಗುವುದಿಲ್ಲವೆಂದು ತಿಳಿಸಿ ಸಂಬಂದಿಸಿದ ಪ್ರಾಧಿಕಾರಕ್ಕೆ ಪತ್ರ ಬರೆಯಬಹುದಾಗಿದೆ ವೃತ್ತಿ ತೆರಿಗೆ ಕಾಯ್ದೆಯ ತೆರಿಗೆ ಶೆಡ್ಯೂಲ ಸಂಖ್ಯೆ 23ರರಲ್ಲಾಗಲಿ ಅಥವಾ ಕಾಯ್ದೆಯ ಇನ್ನಾವುದೆ ಶೆಡ್ಯೂಲ್ನಲ್ಲಾಗಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರಡಿಯಲ್ಲಿ ನೊಂದಣಿಗೊಂಡ ಸಹಕಾರಿಗಳನ್ನು ವೃತ್ತಿ ತೆರಿಗೆ ಕಾಯ್ದೆಯ ವ್ಯಾಪ್ತಿಗೆ ಒಳಪಡಿಸಿರುವುದಿಲ್ಲ. ಆದ್ದರಿಂದ ತಮಗೆ ಕಳುಹಿಸಿರುವ ನೋಡೀಸಿಗೆ ಪ್ರತಿಯಾಗಿ ಮೇಲೆ ತಿಳಿಸಲಾದಂತೆ ಸೌಹಾರ್ದ ಸಹಕಾರಿಗಳನ್ನು ವೃತ್ತಿ ತೆರಿಗೆ ವ್ಯಾಪ್ತಿಗೆ ಒಲಪಡಿಸದೇ ಇರುವ ಕುರಿತು ಸಂಬಂದಪಟ್ಟ ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಡಬಹುದಾಗಿದೆ. ಅಲ್ಲದೆ ತಮ್ಮನ್ನು ಬ್ಯಾಂಕ ಎಂದು ಉಲ್ಲೇಖಿಸಿ ಪತ್ರ ಬಂದಿರುವುದರಿಂದ ಸಕ್ಷಮ ಪ್ರಾಧಿಕಾರಕ್ಕೆ ತಮ್ಮದು ಬ್ಯಾಂಕ ಅಲ್ಲ ಬದಲಾಗಿ ಪತ್ತಿನ ಸೌಹಾರ್ದ ಸಹಕಾರಿ ಎಂದು ತಿಳಿಸಿ ಪತ್ರ ಬರೆಯಬಹುದಾಗಿದೆ.

- **ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ. ಮಸ್ಕಿ**

ಪ್ರಶ್ನೆ : Kindly give your clarification to the Notice issued by the Income Tax officer, Ward-2 Raichur

**ವಿವರಣೆ :** Section 80p of the Incime Tax Act,1961 deals with deduction inrespect of income of co-operative societies . As per the provisions of the said section (80p)

1. Where, incase of an assessee being a co-operative society, the gross total income includes any income referred to in sub section (2),there shall be deducted in accordance with and subject to the provisions of this section,the sums specified in sub-section (2), in computing the total income of the assessee.

2. (2)The sums referred to in sub section (1) shall be following,namelyLa) In the case of a co-operative society engaged in – (i) Carrying on the business of banking or providing credit facilities to its members.

Consequent to the amendment brought in by Finance Act 2006 with effect from1-4-2007,sub section 4 has been inserted to the provisions of section 80 p wherein it is stated that the provisions of this section (80P) shall apply only to co-operative Banks. Hence, the co-operative societies carrying on the business of providing credit facility to its members continue to get deduction under section 80 P ( a ) ( I ) of the Income Tax Act. In your case you are eligible to get entire income deducted under the said section.

- **ಶ್ರೀ ಜಗದೀಶ ಜೋಶಿ ಶಾಖಾ ವ್ಯವಸ್ಥಪಕರು ಶ್ರೀ ಪ್ರಭುಲಿಂಗೆಶ್ವರ ಸೌಹಾರ್ದ ಸಹಕಾರಿ ನಿ. ಸಿದ್ದಾಪುರ ತಾ. ಜಮಖಂಡಿ ಜಿ. ಬಾಗಲಕೋಟೆ.**

**ಪ್ರಶ್ನೆ : 1. ಬೇರೆ ರಾಜ್ಯದ ರೆವಿನ್ಯೂ ಸ್ಟಾಂಪಗಳನ್ನು ಸಾಲ ಪತ್ರಗಳಿಗೆ ಅಥವಾ ಬಾಂಡ್‌ಗಳಿಗೆ ಅಂಟಿಸಿದರೆ ಅದು ವ್ಯಾಲಿಡ್ ಆಗುತ್ತದೆಯೆ?**

ಉತ್ತರ : ಬೇರೆ ರಾಜ್ಯದ ರೆವಿನ್ಯೂ ಸ್ಟಾಂಪಗಳನ್ನು ಸಾಲ ಪತ್ರಗಳಿಗೆ ಅಥವಾ ಬಾಂಡಗಳಿಗೆ ಅಂಟಿಸಿದರೆ ಅದು ವ್ಯಾಲಿಡ್ ಆಗುವುದಿಲ್ಲ

**2. ಎಷ್ಟು ದಿನದ ಹಿಂದಿನ ಇ–ಸ್ಟಾಂಪ್ (ನಾನ್–ಜ್ಯುಡಿಸಿಯಲ್) ನಾವು ಉಪಯೋಗಿಸಬಹುದು?**

**ಉತ್ತರ :** ಇ–ಸ್ಟಾಂಪ್ ಪತ್ರಗಳನ್ನು ಉಪಯೋಗಿಸಲು ಕಾಲಮಿತಿ ಇರುವುದಿಲ್ಲ.

**3. ಸಹಕಾರಿಯಿಂದ ನೀಡುವ ಸಾಲದ ಮರುಪಾವತಿಗಾಗಿ (ಭದ್ರತೆಗೋಸ್ಕರ) ಸಾಲಗಾರರಿಂದ ಮುಂಗಡವಾಗಿ ಚೆಕ್ಕುಗಳನ್ನು ಪಡೆದುಕೊಳ್ಳುವುದು ಸೂಕ್ತವೂ? ಅಥವಾ ಅಲ್ಲವೂ?**

**ಉತ್ತರ :** ಸಾಲದ ಭದ್ರತೆಗೋಸ್ಕರ ಮುಂಗಡವಾಗಿ ಖಾಲಿ ಚೆಕ್‌ಗಳ ಮೇಲೆ ಸಾಲಗಾರರ ಸಹಿಯನ್ನು ಪಡೆದುಕೊಳ್ಳುವುದು ಕಾನೂನು ಬಾಹಿರ.

**4. ನಾಮ ಮಾತ್ರ ಸದಸ್ಯರು ಸಹಕಾರಿಯ ಲಾಭಾಂಶ ಪಡೆಯಲು ಅರ್ಹರೆ ?**

**ಉತ್ತರ :** ನಾಮ ಮಾತ್ರ ಸದಸ್ಯರು ಲಾಭಾಂಶ ಪಡೆಯಲು ಅರ್ಹತೆ ಇರುವುದಿಲ್ಲ.

■

## ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಾಚರಣೆಯಿಂದ ಸಹಕಾರಿ ಕ್ಷೇತ್ರಕ್ಕೆ ಬಲಬಂದಂತಾಗಿದೆ – ಎಸ್.ಆರ್. ಸತೀಶ್‌ಚಂದ್ರ

**ಕೊರಟಗೆರೆಯಲ್ಲಿ ಪತ್ರಿಕಾಗೋಷ್ಠಿ**



ಸಂಯುಕ್ತ ಸಹಕಾರಿಯ ಅಧ್ಯಕ್ಷ ಎಸ್.ಆರ್. ಸತೀಶ ಚಂದ್ರರವರು ತುಮಕೂರು ಜಿಲ್ಲೆಯ ಕೊರಟಗೆರೆಯಲ್ಲಿ ದಿನಾಂಕ : 17/9/2011ರಂದು ಪತ್ರಿಕಾಗೋಷ್ಠಿ ನಡೆಸಿದರು. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿಯು ದಶಮಾನೋತ್ಸವ ಆಚರಿಸುತ್ತಿದ್ದು ವಿವಿಧ ಸೌಹಾರ್ದ ಸಹಕಾರಿಗಳು ಹಲವು ಬಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸರಕಾರಕ್ಕೆ ಹಾಗೂ ಸಾರ್ವಜನಿಕರಿಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಮಾಡಿಕೊಡುತ್ತಿದ್ದಾರೆ. ರಾಜ್ಯದಲ್ಲಿ 1786 ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿದ್ದು ಅದರಲ್ಲಿ 345 ಹಳೆಯ ಕಾಯ್ದೆಯಿಂದ ಪರಿವರ್ತಿತ ಸಹಕಾರಿಗಳಾದರೆ ಉಳಿದವುಗಳು ಹೊಸದಾಗಿ ನೊಂದಣಿಯಾಗಿ ಕಾರ್ಯನಿರ್ವಹಿಸುತ್ತಿವೆ. ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಾಚರಣೆಯಿಂದ ಸಹಕಾರಿ ಕ್ಷೇತ್ರಕ್ಕೆ ಬಲಬಂದಂತಾಗಿದೆ. ಸಹಕಾರಿ ಕ್ಷೇತ್ರದಲ್ಲಿ ಒಂದು ಬಗೆಯ ಹೊಸ ಹುರುಪು ಕಾಣಿಸತೊಡಗಿದೆ. ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ 29 ಜಿಲ್ಲೆಗಳಲ್ಲಿ 143 ತಾಲ್ಲೂಕುಗಳಲ್ಲಿ ರಾಜ್ಯಾದ್ಯಂತ 399 ಸೌಹಾರ್ದ ಸಹಕಾರಿಗಳ ಮೂಲಕ ಇ–ಸ್ಟಾಂಪಿಂಗ ವ್ಯವಹಾರ ನಡೆಸಲಾಗುತ್ತಿದೆ. ಪ್ರತಿದಿನ 1 ಕೋಟಿ ರೂಗಳಿಗೂ ಹೆಚ್ಚು ಆದಾಯವನ್ನು ರಾಜ್ಯ ಬೊಕ್ಕಸಕ್ಕೆ ತುಂಬಿಸುತ್ತ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದರು. ಸಧ್ಯದಲ್ಲಿಯೇ ಗುಲ್ಬರ್ಗಾ, ಮೈಸೂರುಗಳಲ್ಲಿ ವಿಭಾಗೀಯ ಕೇಂದ್ರಗಳನ್ನು ತೆರೆಯಲಾಗುತ್ತದೆ ಎಂದು ತಿಳಿಸಿದರು. ಸಂಯುಕ್ತ ಸಹಕಾರಿಯ ಕೋಲಾರ ನಿರ್ದೇಶಕ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ತುಮಕೂರು ಸಪ್ತಋಷಿ ಸೌಹಾರ್ದ ಪತ್ತಿನ ಸಹಕಾರಿಯ ಸಾಮಾನ್ಯ ಸಭೆ



ತುಮಕೂರಿನ ಸಪ್ತಋಷಿ ಪತ್ತಿನ ಸೌಹಾರ್ದಸಹಕಾರಿಯ 10ನೇ ಸಾಮಾನ್ಯ ಸಭೆ ದಿನಾಂಕ 25/9/2011ರಂದು ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಮ್.ಎಸ್.ವೆಂಕಟಾಚಲರವರು ವಹಿಸಿದ್ದರು. ವಿಷಯಪಟ್ಟಿಯಂತೆ ಮಾತನಾಡಿ ಸೌಹಾರ್ದ ಸಹಕಾರಿಗಳು ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಜನಸಾಮಾನ್ಯರ ಅಭಿವೃದ್ಧಿ ಸಾಧ್ಯ ಎಂದು ತಿಳಿಸಿದರು. ಉಪಾಧ್ಯಕ್ಷ ಶ್ರೀ ಬಿ.ಆರ್.ಶ್ರೀನಿವಾಸರಾವರವರು ಮಾತನಾಡಿ ಸಾಲಪಡೆಯುವುದು ಸದಸ್ಯರ ಹಕ್ಕು ಅದರಂತೆ ಸಕಾಲದಲ್ಲಿ ಮರುಪಾವತಿಸುವುದು ಸದಸ್ಯರ ಜವಾಬ್ದಾರಿ ಎಂದು ತಿಳಿಸಿದರು.

## ಸಿದ್ಧಿವಿನಾಯಕ ಸೌಹಾರ್ದ ಸಹಕಾರಿಯಲ್ಲಿ ಡೆಬಿಟ್ ಕಾರ್ಡ್ ಹಾಗೂ ಪೇ ಥ್ರೂ ಸಿಸ್ಟಮ್ ಯೋಜನೆ



ಗುಲ್ಬರ್ಗಾನಗರದ ಸಿದ್ಧಿವಿನಾಯಕ ಸೌಹಾರ್ದ ಸಹಕಾರಿಯಲ್ಲಿ ಎಕ್ಸಿಸ್ ಬ್ಯಾಂಕ ಸಹಯೋಗದೊಂದಿಗೆ ಡೆಬಿಟ್ ಕಾರ್ಡ ಹಾಗೂ ಪೇ ಥ್ರೂ ಸಿಸ್ಟಮ್ ಯೋಜನೆಯನ್ನು ಇಲ್ಲಿನ ಗುಡ್ಲಕ್ ಹೋಟೆಲ್ನಲ್ಲಿ ಬಿಡುಗಡೆ ಮಾಡಲಾಯಿತು. ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರರವರು ಈ ಕಾರ್ಡಗಳನ್ನು ಬಿಡುಗಡೆಮಾಡಿ ಯೋಜನೆಗಳ ಯಶಸ್ಸಿಗೆ ಸಹಕಾರಿಗೆ ಶುಭ ಹಾರೈಸಿದರು. ಸಹಕಾರಿಯ ಅಧ್ಯಕ್ಷ ಶ್ರೀ ಸಂಜೀವ ಮಹಾಜನರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಯುಕ್ತ ಸಹಕಾರಿ ನಿರ್ದೇಶಕ ಶ್ರೀ ವೈ.ಟಿ.ಪಾಟೀಲ್ ಸಮಾರಂಭದಲ್ಲಿ ಶ್ರೀ ಅಮಿತಕುಮಾರ ಸೀನೀಯರ ಮೆನೆಜರ ಎಸ್.ಬಿ.ಆರ್.ಟಿ.ಎಸ್ ಬೆಂಗಳೂರು ಸರ್ಕಲ್ – 2 ಇವರು ಉಪಸ್ಥಿತರಿದ್ದು ಯೋಜನೆ ಬಗ್ಗೆ ಮಾಹಿತಿ ನೀಡಿದರು. ಶ್ರೀ ಸಂತೋಷ ಡೆಪ್ಯೂಟಿ ಮೆನೆಜರ್, ಶ್ರೀ ವೈ.ಶಾಂತಿಸ್ವರೂಪ ಉಪಾಧ್ಯಕ್ಷರು, ಶಾಖಾ ವ್ಯವಸ್ಥಾಪಕರು ಅನೇಕ ಗಣ್ಯರು ಮತ್ತು ಸಹಕಾರಿಯ ನಿರ್ದೇಶಕರು,ಸದಸ್ಯರು ಹಾಗೂ ಸಿಬ್ಬಂದಿವರ್ಗದವರು ಉಪಸ್ಥೀತರಿದ್ದರು.

## ವಾಸವಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಲ್ಲಿ ಎ.ಟಿ.ಎಮ್. ಕಾರ್ಡ್ ಯೋಜನೆ



ಗಂಗಾವತಿಯ ವಾಸವಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಲ್ಲಿ ಆಕ್ಸಿಸ್ ಬ್ಯಾಂಕ ಸಹಯೋಗದೊಂದಿಗೆ ಎ.ಟಿ.ಎಮ್.ಕಾರ್ಡ ಯೋಜನೆಯನ್ನು ದಿನಾಂಕ 5/9/2011 ರಂದು ಪ್ರಾರಂಭಿಸಲಾಯಿತು ಸಹಕಾರಿ ಅಧ್ಯಕ್ಷರಾದ ಶ್ರೀ ಜೆ.ನಾಗರಾಜ ಶ್ರೇಷ್ಠಿಯವರು ಗಂಗಾವತಿ ತಾಲ್ಲೂಕಿನಲ್ಲೆ ವಾಸವಿ ಸೌಹಾರ್ದ ಸಹಕಾರಿಯು ಇಂತಹ ಕಾರ್ಯಕ್ರಮವನ್ನು ಪ್ರಾರಂಭಿಸಿರುವಲ್ಲಿ ಮೊದಲಿಗರು. ಎಂದು ತಿಳಿಸಿದರು. ಬ್ಯಾಂಕಿನ ವ್ಯವಸ್ಥಪಕರಾದ ಶ್ರೀ ಎಸ್.ವಿ.ರಮೇಶ ಮತ್ತು ಅನೇಕ ಗಣ್ಯರು ಉಪಸ್ಥಿತರಿದ್ದರು.

## ಸಂಯುಕ್ತ ಸಹಕಾರಿಯ ಸುತ್ತೋಲೆಗಳು : ಸಹಕಾರಿಗಳು ಗಮನಿಸಿ

ಸಂಯುಕ್ತ ಸಹಕಾರಿಯ 10 ನೇ ಸಾಮಾನ್ಯ ಸಭೆಯು ದಿನಾಂಕ 24–9–2011 ರಂದು ನಡೆದು ಸೌಹಾರ್ದ ಸಹಕಾರಿಗಳಲ್ಲಿ ಲೆಕ್ಕಪರಿಶೋಧಕರ ನೇಮಕಾತಿಗೆ ಸಂಬಂದಿಸಿದಂತೆ, ನಿರ್ದೇಶಕರ ಅನರ್ಹತೆ, ಸಹ ಆಯ್ಕೆ, ಪದಾಧಿಕಾರಿಗಳ ಆಯ್ಕೆ ಮತ್ತು ಸಂಯುಕ್ತ ಸಹಕಾರಿಗೆ ಪಾವತಿಸುವ ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿ ಬಗ್ಗೆ ಸುತ್ತೋಲೆಗಳನ್ನು ಎಲ್ಲ ಸಹಕಾರಿಗಳಿಗೆ ಈಗಾಗಲೆ ಕಳುಹಿಸಲಾಗಿದೆ. ಸಹಕಾರಿಗಳ ಮಾಹಿತಿಗಾಗಿ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.

## ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಗಾಗಿ ಲೆಕ್ಕಪರಿಶೋಧಕರ ನೇಮಕಾತಿಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳು ಕ.ಸೌ.ಸ. ಅಧಿನಿಯಮ, 1997ರ ಕಲಂ 53 (7) (ಎ) ಅಡಿ

**ಸಂಖ್ಯೆ : ಸುತ್ತೋಲೆ 5/2011–12** **ದಿನಾಂಕ : 1 ಅಕ್ಟೋಬರ್ 2011**

1. ಸಹಕಾರಿಯ ಲೆಕ್ಕಪರಿಶೋಧಕರನ್ನು ಸಾಮಾನ್ಯ ಸಭೆಯಲ್ಲಿಯೇ ನೇಮಕ ಮಾಡಿಕೊಳ್ಳಬೇಕು. ಈ ಅಧಿಕಾರವನ್ನು ಆಡಳಿತ ಮಂಡಳಿಗೆ ಪ್ರತ್ಯಾಯೋಜನೆ ಮಾಡತಕ್ಕದ್ದಲ್ಲ.
2. ಸಾಮಾನ್ಯ ಸಭೆ ಮುಗಿದ 30 ದಿನಗಳೊಳಗೆ ಲೆಕ್ಕಪರಿಶೋಧಕರಿಗೆ ನೇಮಕಾತಿ ಆದೇಶವನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ನೀಡಬೇಕು. ಮತ್ತು ಅದರ ಪ್ರತಿಯನ್ನು ಸಂಯುಕ್ತ ಸಹಕಾರಿಗೆ ಕಳುಹಿಸಬೇಕು.
3. ಯಾವುದೇ ಕಾರಣಕ್ಕಾಗಿಯೂ ಸಾಮಾನ್ಯ ಸಭೆಯಲ್ಲಿ ನೇಮಕವಾದ ಲೆಕ್ಕಪರಿಶೋಧಕರನ್ನು ಬದಲಾಯಿಸತಕ್ಕದ್ದಲ್ಲ. ಒಂದು ವೇಳೆ ಲೆಕ್ಕಪರಿಶೋಧಕರು ಅನಿವಾರ್ಯ ಕಾರಣಗಳಿಂದ ಲೆಕ್ಕಪರಿಶೋಧನೆ ನಡೆಸಲು ಸಾಧ್ಯವಿಲ್ಲವೆಂದಾದಲ್ಲಿ ಅವರಿಂದ, ನಿರಾಕ್ಷೇಪಣಾ ಪತ್ರ ಪಡೆದು, ಮತ್ತು ಸಂಯುಕ್ತ ಸಹಕಾರಿಯ ಅನುಮತಿ ಪಡೆದು ಆಡಳಿತ ಮಂಡಳಿಯು ಲೆಕ್ಕಪರಿಶೋಧಕರನ್ನು ಬದಲಾಯಿಸಬಹುದು.
4. ಸಾಮಾನ್ಯ ಸಭೆಗೂ ಮೊದಲೆ ಲೆಕ್ಕಪರಿಶೋಧಕರೊಂದಿಗೆ ಶುಲ್ಕ, ಲಭ್ಯತೆ ಇತ್ಯಾದಿಗಳ ಕುರಿತು ಸಮಾಲೋಚನೆ ನಡೆಸಿ ಸೂಕ್ತ ಹೆಸರನ್ನು ಆಡಳಿತ ಮಂಡಳಿಯು ಸಾಮಾನ್ಯ ಸಭೆಗೆ ಶಿಫಾರಸ್ಸು ಮಾಡುವುದು ಸೂಕ್ತ.
5. ಯಾವುದೇ ಸಹಕಾರಿಯ ಲೆಕ್ಕಪರಿಶೋಧನೆಯನ್ನು ನಿರಂತರ ಮೂರು ವರ್ಷಗಳಿಗೂ ಹೆಚ್ಚು ಕಾಲ ಒಬ್ಬರಿಂದಲೇ (ಅಥವಾ ಅವರು ಪಾಲುದಾರರಾಗಿರುವ ಸಂಸ್ಥೆ) ನಡೆಸುವುದು ಸೂಕ್ತವಲ್ಲ.
6. ಒಂದು ಕೋಟಿ ರೂ.ಗಳಿಗೂ ಹೆಚ್ಚಿನ ದುಡಿಯುವ ಬಂಡವಾಳ ಹೊಂದಿರುವ ಸಹಕಾರಿಗಳು ಸನ್ನದು ಲೆಕ್ಕಪರಿಶೋಧಕರಿಂದಲೇ ಲೆಕ್ಕಪರಿಶೋಧನೆಯನ್ನು ನಡೆಸುವುದು ಸೂಕ್ತ.

ಈ ಮಾನದಂಡಗಳನ್ನು ನನ್ನ ಮೊಹರು ಹಾಗೂ ಸಹಿಯೊಂದಿಗೆ ಇಂದು ಅಂದರೆ, 1 ಅಕ್ಟೋಬರ್ 2011 ರಂದು ನೀಡಲಾಗಿದೆ.

**ಶರಣಗೌಡ ಜಿ. ಪಾಟೀಲ**
ವ್ಯವಸ್ಥಾಪಕ ನಿರ್ದೇಶಕರು

# ಸೌಹಾರ್ದ ಸಹಕಾರಿಗಳ ನಿರ್ದೇಶಕರ ಅನರ್ಹತೆಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳು

## ಕ.ಸೌ.ಸ. ಅಧಿನಿಯಮ, 1997ರ ಕಲಂ 53 (7) (ಎ) ಅಡಿ

**ಸಂಖ್ಯೆ : ಸುತ್ತೋಲೆ 6/2011–12** **ದಿನಾಂಕ : 1 ಅಕ್ಟೋಬರ್ 2011**

1. ಕಾಯ್ದೆ ಕಲಂ 20 ರಂತೆ ಪ್ರತಿಯೊಬ್ಬ ಸದಸ್ಯನು ಸಹಕಾರಿಯೊಂದಿಗೆ ಉಪವಿಧಿಯಲ್ಲಿ ನಿಗದಿಪಡಿಸಿದ ಕನಿಷ್ಠ ವ್ಯವಹಾರ ಮಾಡಿರಬೇಕು. ಸತತ ಮೂರು ಸಾಮಾನ್ಯ ಸಭೆಗಳಿಗೆ ಅನುಮತಿ ಪಡೆಯದೇ ಗೈರು ಹಾಜರಾದರೆ ಅಂತಹವರು ಸಹಕಾರಿಯ ಸದಸ್ಯರಾಗಿ ಮುಂದುವರೆಯಲು ಅನರ್ಹರು. ಈ ರೀತಿ ಅನರ್ಹರಾದವರು ಕಲಂ 25(1)(ಎ) ರಂತೆ ಸಹಕಾರಿಯ ನಿರ್ದೇಶಕರಾಗಿ ಮುಂದುವರೆಯಲು ಕೂಡ ಅನರ್ಹರು. ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಈ ಕುರಿತು ಸೂಕ್ತ ದಾಖಲೆಗಳ ಸಮೇತ ಸಂಯುಕ್ತ ಸಹಕಾರಿಗೆ ಪ್ರಸ್ತಾವ ಸಲ್ಲಿಸತಕ್ಕದ್ದು.

2. ಸಹಕಾರಿಯ ಉಪವಿಧಿಗಳಲ್ಲಿ ಇತರೆ ಯಾವುದಾದರೂ ಅನರ್ಹತೆಯನ್ನು ನಿರ್ದಿಷ್ಟಪಡಿಸಿದ್ದಲ್ಲಿ, ಯಾವುದಾದರೂ ನಿರ್ದೇಶಕರು ಅಂತಹ ಅನರ್ಹತೆಗಳಿಗೆ ಗುರಿಯಾಗಿದ್ದರೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಈ ಕುರಿತು ಸೂಕ್ತ ದಾಖಲೆಗಳ ಸಮೇತ ಸಂಯುಕ್ತ ಸಹಕಾರಿಗೆ ವಿವರವಾದ ಪ್ರಸ್ತಾವ ಸಲ್ಲಿಸತಕ್ಕದ್ದು.

3. ಗೈರು ಹಾಜರಿಗೆ ಅನುಮತಿ ಪಡೆಯದೇ ನಿರಂತರ ಮೂರು ಆಡಳಿತ ಮಂಡಳಿ ಸಭೆಗಳಿಗೆ ಗೈರು ಹಾಜರಾದಲ್ಲಿ, ಸಭೆಯ ನೋಟೀಸ್ ಕಳಿಸಿದ ದಾಖಲೆ, ಮತ್ತು ಆಡಳಿತ ಮಂಡಳಿ ಹಾಜರಾತಿ ಪುಸ್ತಕದ ಪ್ರತಿಯೊಂದಿಗೆ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಸಂಯುಕ್ತ ಸಹಕಾರಿಗೆ ಪ್ರಸ್ತಾವ ಸಲ್ಲಿಸತಕ್ಕದ್ದು.

**ಗಮನಿಸಿ:**

**ಕೆಲವು ಸಹಕಾರಿಗಳು ಆಡಳಿತ ಮಂಡಳಿ ಸಭೆಯ ನೋಟೀಸನ್ನು ದೂರವಾಣಿ ಮೂಲಕ ತಿಳಿಸಿರುವುದಾಗಿ, ಅಥವಾ ಸಾಮಾನ್ಯ ಅಂಚೆಯ ಮೂಲಕ ಕಳುಹಿಸಿರುವುದಾಗಿ ಪತ್ರ ಕಳುಹಿಸುತ್ತಿದ್ದಾರೆ. ಅಥವಾ ಕೆಲವು ಸಹಕಾರಿಗಳು ಸಹಕಾರಿಯ ಪತ್ರ ಬಟವಾಡೆ ಪುಸ್ತಕದ ಪ್ರತಿಯನ್ನು ಕಳುಹಿಸುತ್ತಿದ್ದಾರೆ. ಇವುಗಳನ್ನು ನೋಟೀಸ್ ಕಳುಹಿಸಿರುವುದಕ್ಕೆ ದಾಖಲೆ ಎಂದು ಪರಿಗಣಿಸಲು ಸಾಧ್ಯವಿಲ್ಲ. ಆದ್ದರಿಂದ ನೋಟೀಸನ್ನು ನೋಂದಾಯಿತ ಅಥವಾ ಪ್ರಮಾಣಿತ ಅಂಚೆಯ ಮೂಲಕ ಕಳುಹಿಸಿ, ಅದರ ದಾಖಲೆಯನ್ನು ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು.**

4. ಯಾವುದೇ ಕಾನೂನಿನ ಅಡಿಯಲ್ಲಿ ನೈತಿಕ ಅಧಃಪತನವನ್ನೊಳಗೊಂಡ ಅಪರಾಧಕ್ಕಾಗಿ ಅಥವಾ ಸೌಹಾರ್ದ ಕಾಯ್ದೆಯಡಿಯ ಅಪರಾಧಕ್ಕಾಗಿ ನಿರ್ಣಿತ ಅಪರಾಧಿಯಾಗಿದ್ದರೆ, ಅಂತಹ ಆದೇಶದ ಪ್ರತಿಯೊಂದಿಗೆ ಸಂಯುಕ್ತ ಸಹಕಾರಿಗೆ ಪ್ರಸ್ತಾವ ಸಲ್ಲಿಸತಕ್ಕದ್ದು.

5. ಯಾವುದಾದರೂ ನಿರ್ದೇಶಕರು ಸಾಲದ ಯಾವುದೇ ಕಂತನ್ನು ಮರುಸಂದಾಯ ಮಾಡಲು ತಪ್ಪಿದರೆ ಸಾಲ ಮಂಜೂರಾದ ದಿನಾಂಕ, ಮೊತ್ತ, ಪ್ರತಿ ಕಂತಿನ ಮೊತ್ತ, ಮತ್ತು ಸುಸ್ತಿಯಾದ ಕಂತು ತುಂಬಬೇಕಿದ್ದ ದಿನಾಂಕಗಳನ್ನೊಳಗೊಂಡ ವಿವರವಾದ ಪ್ರಸ್ತಾವ ಸಲ್ಲಿಸಬೇಕು.

   ಯಾವುದಾದರೂ ನಿರ್ದೇಶಕರು ಸಾಲದ ನಿರಂತರ ಮೂರು ಕಂತುಗಳನ್ನು ಮರುಸಮದಾಯ ಮಾಡಲು ತಪ್ಪಿರುವಂಥ ಸಾಲಗಾರನಿಗೆ ಜಾಮೀನುದಾರನಾಗಿದ್ದರೆ, ಈ ಕುರಿತು ಸದರಿ ನಿರ್ದೇಶಕರಿಗೆ ನೋಟೀಸ್ ನೀಡಿ ಮರುಪಾವತಿಗೆ ಅವಕಾಶ ನೀಡಿರಬೇಕು. ಆ ನಂತರವೂ ಮರುಸಂದಾಯ ಮಾಡಲು ತಪ್ಪಿದಲ್ಲಿ ಸಾಲ ಮಂಜೂರಾದ ದಿನಾಂಕ, ಮೊತ್ತ, ಪ್ರತಿ ಕಂತಿನ ಮೊತ್ತ, ಮತ್ತು ಸುಸ್ತಿಯಾದ ಕಂತುಗಳನ್ನು ತುಂಬಬೇಕಿದ್ದ ದಿನಾಂಕಗಳನ್ನೊಳಗೊಂಡ ವಿವರವಾದ ಪ್ರಸ್ತಾವ ಸಲ್ಲಿಸಬೇಕು.

6. ಯಾವುದೇ ಕಾರಣಕ್ಕೂ ನಿರ್ದೇಶಕರನ್ನು ಆಡಳಿತ ಮಂಡಳಿಯೇ ಅನರ್ಹಗೊಳಿಸುವ ನಿರ್ಣಯ ಸ್ವೀಕರಿಸಲು ಅವಕಾಶವಿಲ್ಲ.

7. ಯಾವುದಾದರೂ ನಿರ್ದೇಶಕರು ರಾಜಿನಾಮೆ ನೀಡಿದಲ್ಲಿ ಅಥವಾ ಸಂಯುಕ್ತ ಸಹಕಾರಿಯು ಅನರ್ಹಗೊಳಿಸಿದ್ದಲ್ಲಿ, ಆಡಳಿತ ಮಂಡಳಿ ಅವಧಿ ಆರು ತಿಂಗಳುಗಳಿಗಿಂತ ಹೆಚ್ಚಿದ್ದ ಸಂದರ್ಭದಲ್ಲಿ ಅರ್ಹ ಸದಸ್ಯರನ್ನು ಸಹ ಆಯ್ಕೆ ಮಾಡಿಕೊಳ್ಳಬಹುದು. ಅರ್ಹರಲ್ಲದ ಸದಸ್ಯರನ್ನು ಸಹ ಆಯ್ಕೆ ಮಾಡಿಕೊಳ್ಳುವಂತಿಲ್ಲ.

8. ಇಂತಹ ಸಹ ಆಯ್ಕೆ ಮಾಡಿಕೊಂಡ 10 ದಿನಗಳೊಳಗೆ ಸಹ ಆಯ್ಕೆ ಮಾಡಿಕೊಂಡ ಸದಸ್ಯರ ವಿವರವನ್ನು ಯಾವ ನಿರ್ದೇಶಕರ ಸ್ಥಾನದಲ್ಲಿ ಸಹ ಆಯ್ಕೆ ಮಾಡಲಾಗಿದೆ ಎಂಬ ವಿವರದೊಂದಿಗೆ ಸಂಯುಕ್ತ ಸಹಕಾರಿಗೆ ಕಳುಹಿಸತಕ್ಕದ್ದು. ಯಾವುದಾದರೂ ನಿರ್ದೇಶಕರ ರಾಜಿನಾಮೆಯ ಕಾರಣ ತೆರವಾದ ಸ್ಥಾನಕ್ಕೆ ಸಹ ಆಯ್ಕೆ ಮಾಡಿಕೊಂಡಿದ್ದಲ್ಲಿ, ರಾಜಿನಾಮೆಯ ಪತ್ರದ ಪ್ರತಿ ಮತ್ತು ರಾಜಿನಾಮೆ ಅಂಗೀಕಾರವಾದ ಆಡಳಿತ ಮಂಡಳಿಯ ದಿನಾಂಕದ ವಿವರದೊಂದಿಗೆ ಕಳುಹಿಸತಕ್ಕದ್ದು.

9. ಅನರ್ಹತೆ, ರಾಜಿನಾಮೆ ಅಥವಾ ಇನ್ನಾವುದೇ ಕಾರಣದಿಂದ ಅಧ್ಯಕ್ಷ ಅಥವಾ ಉಪಾಧ್ಯಕ್ಷರ ಹುದ್ದೆ ತೆರವಾದಲ್ಲಿ ಹದಿನೈದು ದಿನಗಳೊಳಗೆ ತೆರವಾದ ಸ್ಥಾನದ ಚುನಾವಣೆಗಾಗಿ ಸಭೆಯ ಸ್ಥಳ, ದಿನಾಂಕ ಮತ್ತು ಸಮಯದ ವಿವರವನ್ನೊಳಗೊಂಡ ಲಿಖಿತ ನೋಟಿಸ್ ನೀಡಿ ಆಡಳಿತ ಮಂಡಳಿ ಸಭೆಯನ್ನು ಮುಖ್ಯ ಕಾರ್ಯನಿರ್ವಾಹಕನು ಕರೆಯತಕ್ಕದ್ದು.

10. ಯಾವುದೇ ಕಾರಣಕ್ಕೂ ಹದಿನೈದು ದಿನಗಳಿಗೂ ಹೆಚ್ಚು ಕಾಲ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಹುದ್ದೆಯನ್ನು ಖಾಲಿ ಉಳಿಸತಕ್ಕದ್ದಲ್ಲ.

11. ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆ ನಡೆದ ಹದಿನೈದು ದಿನಗಳೊಳಗೆ ವಿವರವನ್ನು ಸಂಯುಕ್ತ ಸಹಕಾರಿಗೆ ಕಳುಹಿಸತಕ್ಕದ್ದು.

ಈ ಮಾನದಂಡಗಳನ್ನು ನನ್ನ ಮೊಹರು ಹಾಗೂ ಸಹಿಯೊಂದಿಗೆ ಇಂದು ಅಂದರೆ, 1 ಅಕ್ಟೋಬರ್ 2011 ರಂದು ನೀಡಲಾಗಿದೆ.

**ಶರಣಗೌಡ ಜಿ. ಪಾಟೀಲ**
ವ್ಯವಸ್ಥಾಪಕ ನಿರ್ದೇಶಕರು